# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಫೆಬ್ರವರಿ 20, 2021

ಸಂಪುಟ : 47 ಸಂಚಿಕೆ : 292 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com





ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ದಾವಣಗೆರೆ ಮಹಾನಗರ ಪಾಲಿಕೆಯಿಂದ
ಮಹಾಪೌರರಾದ ಶ್ರೀ ಬಿ.ಜಿ. ಅಜಯ್‌ಕುಮಾರ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ
'ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ' ಕಾರ್ಯಕ್ರಮದ ಸಮಾರೋಪ ಸಮಾರಂಭ.
ದಿನಾಂಕ:20-02-2021ನೇ ಶನಿವಾರ ಬೆಳಿಗ್ಗೆ 10-00 ರಿಂದ ಸಂಜೆ 5-00 ರವರೆಗೆ, ಸ್ಥಳ: ಹೈಸ್ಕೂಲ್ ಮೈದಾನ, ಪಿ.ಜೆ.ಬಡಾವಣೆ, ದಾವಣಗೆರೆ.

ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ




**ಸಂಭ್ರಮದ ಶ್ರೀ ಅನ್ನಪೂರ್ಣೇಶ್ವರಿ ದೇವಿ ರಥೋತ್ಸವ**

ದಾವಣಗೆರೆ ಶ್ರೀ ಡಿ.ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಿ ದೇವಸ್ಥಾನದಲ್ಲಿ ಶುಕ್ರವಾರ ಏರ್ಪಾಡಾಗಿದ್ದ ಶ್ರೀ ದೇವಿಯ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

## ಲಾಕರ್ ನಿರ್ವಹಣೆ : ಮಾರ್ಗಸೂಚಿಗೆ ಆದೇಶ

ನವದೆಹಲಿ, ಫೆ. 19 – ಲಾಕರ್‌ಗಳ ಕಾರ್ಯನಿರ್ವಹಣೆಯಲ್ಲಿ ಬ್ಯಾಂಕುಗಳು ಹೊಣೆಯನ್ನು ಗ್ರಾಹಕರ ಮೇಲೆ ಹಾಕಿ ಕೈ ತೊಳೆದುಕೊಳ್ಳಲಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಬ್ಯಾಂಕುಗಳು ಲಾಕರ್ ನಿರ್ವಹಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಆರು ತಿಂಗಳಲ್ಲಿ ಮಾರ್ಗಸೂಚಿ ರೂಪಿಸುವಂತೆ ರಿಸರ್ವ್ ಬ್ಯಾಂಕ್‌ಗೆ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಶಾಂತನಗೌಡರ್ ಹಾಗೂ ವಿನೀತ್ ಶರಣ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ರಿಸರ್ವ್ ಬ್ಯಾಂಕ್‌ಗೆ ಸೂಚನೆ ನೀಡಿದ್ದು, ಬ್ಯಾಂಕಿಂಗ್ ಸಂಸ್ಥೆಗಳು ಜಾಗತೀಕರಣದ ನಂತರ ಜನಸಾಮಾನ್ಯರ ಜೀವದಲ್ಲಿ ಪ್ರಮುಖ ಪಾತ್ರ ಹೊಂದಿವೆ ಎಂದು ತಿಳಿಸಿದೆ.

ಜನರು ನಗದು ರಹಿತ ವ್ಯವಸ್ಥೆಗೆ ಹೋಗುತ್ತಿರುವುದರಿಂದ ಜನರು ಚರಾಸ್ತಿಗಳನ್ನು (4ನೇ ಪುಟಕ್ಕೆ)

## ಅನ್ನಭಾಗ್ಯ 10 ಕೆಜಿಗೆ ಏರಿಕೆ : ಸಿದ್ದರಾಮಯ್ಯ ಭರವಸೆ



ಬೆಂಗಳೂರು, ಫೆ. 19 – 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಹೇಳಿರುವ ಕಾಂಗ್ರೆಸ್ ಹಿರಿಯ ನಾಯಕ ಸಿದ್ದರಾಮಯ್ಯ, ಆ ಸಂದರ್ಭ ದಲ್ಲಿ ಪ್ರತಿಯೊಬ್ಬರಿಗೂ ತಲಾ 10 ಕೆ.ಜಿ. ಅಕ್ಕಿ ನೀಡುವುದಾಗಿ ಭರವಸೆ ನೀಡಿದ್ದಾರೆ.

ಪರೋಕ್ಷವಾಗಿ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿರುವುದನ್ನು ತಿಳಿಸಿರುವ ಅವರು ಬಿಜೆಪಿ ಸರ್ಕಾರ ಬಡವರಿಗೆ ನೀಡುತ್ತಿದ್ದ 7 ಕೆ.ಜಿ. ಅಕ್ಕಿಯನ್ನು ಐದು ಕೆಜಿಗೆ ಇಳಿಸಿದೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ 10 ಕೆ.ಜಿ. ಅಕ್ಕಿ ನೀಡುವುದಾಗಿ ಹೇಳಿದ್ದಾರೆ.

# ಕೊರೊನಾ ಲಸಿಕಾಕರಣ ದಾವಣಗೆರೆಗೆ 13ನೇ ಸ್ಥಾನ

### ಪ್ರಗತಿ ಹೆಚ್ಚಳಕ್ಕೆ ಸಿಇಒ ಡಾ.ವಿಜಯ ಮಹಾಂತೇಶ ಸೂಚನೆ

ದಾವಣಗೆರೆ, ಫೆ. 19- ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಆಸಕ್ತಿ ವಹಿಸಿ, ಜವಾಬ್ದಾರಿಯಿಂದ ಆರೋಗ್ಯ ಕಾರ್ಯಕರ್ತರ ಮತ್ತು ಫ್ರಂಟ್‌ಲೈನ್ ಸಿಬ್ಬಂದಿಗಳ ಮನವೊಲಿಸಿ ಕೊರೊನಾ ಲಸಿಕೆ ಹಾಕಿಸುವ ಮೂಲಕ ನಿಗದಿತ ಗುರಿ ಸಾಧಿಸಬೇಕು. ಕೊರೊನಾ ಲಸಿಕಾಕರಣವನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ದಿನಗಳಲ್ಲಿ ಲಸಿಕಾಕರಣ ಹೆಚ್ಚಿಸಬೇಕೆಂದು ಜಿ.ಪಂ. ಸಿಇಓ ಡಾ.ವಿಜಯ ಮಹಾಂತೇಶ ದಾನಮ್ಮನವರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಇಂದು ಆಯೋಜಿಸಲಾಗಿದ್ದ ಕೋವಿಡ್ ಲಸಿಕೆ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಮಾತನಾಡಿದ ಅವರು, ಮೊದಲನೇ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ನೀಡಲಾಗುತ್ತಿರುವ ಮೊದಲನೇ ಡೋಸ್‌ಗೆ ಫೆ.25 ಕಡೆಯ ದಿನವಾಗಿದೆ. ಫ್ರಂಟ್‌ಲೈನ್ ವರ್ಕರ್ಸ್(ಪೊಲೀಸ್, ಕಂದಾಯ, ನಗರ ಸ್ಥಳೀಯ ಸಂಸ್ಥೆಗಳು, ಇತರೆ)ಗೆ ಮಾರ್ಚ್ 6 ಕಡೆಯ ದಿನವಾಗಿದೆ. ಇಷ್ಟರೊಳಗೆ ನೋಂದಾಯಿಸಿಕೊಂಡವರೆಲ್ಲರಿಗೂ ಲಸಿಕೆ ನೀಡುವ ಕೆಲಸ ಆಗಬೇಕು ಎಂದರು.



ದಾವಣಗೆರೆಯಲ್ಲಿ ಪ್ರಗತಿ ಕಡಿಮೆ ಇದೆ. ಜಿಲ್ಲೆ ಲಸಿಕಾಕರಣ ಕವರೇಜ್‌ನಲ್ಲಿ 13 ನೇ ಸ್ಥಾನದಲ್ಲಿದ್ದು, ಜಿಲ್ಲೆಯಲ್ಲಿ ಒಟ್ಟು 18,920 ಜನರು ನೋಂದಾಯಿಸಿಕೊಂಡಿದ್ದು, 10047 ಮೊದಲನೇ ಡೋಸ್, 1590 ಎರಡನೇ ಡೋಸ್ ಲಸಿಕೆ ಪಡೆದು, ಭಾಗಶಃ ಲಸಿಕೆ(1ನೇ ಡೋಸ್) ಶೇ.53.1 ಆಗಿದೆ. ಮೊದಲನೇ ಹಂತದ ನೋಂದಾವಣೆಯಲ್ಲಿ ಆಗಿರುವ ನಕಲು ರದ್ದುಪಡಿಸುವ ಕೆಲಸ ಪ್ರಗತಿಯಲ್ಲಿದೆ ಎಂದರು.

ಹೋಂ ಗಾರ್ಡ್ಸ್ ಶೇ 14.8, ಪೊಲೀಸ್ ಶೇ.38.8, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇ 22 ಮತ್ತು ಕಂದಾಯ ಇಲಾಖೆಯಲ್ಲಿ ಶೇ.12.6 ಪ್ರಗತಿ ಆಗಿದೆ. ಹಾಗೂ ಬಾಪೂಜಿ ಮತ್ತು ಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಪ್ರಗತಿ ಕಡಿಮೆ ಇದೆ. ಇಲಾಖೆಗಳ ಹಾಗೂ ಸಂಸ್ಥೆಗಳ ಮುಖ್ಯಸ್ಥರು ಕಡೆಯ ದಿನಾಂಕದೊಳಗೆ ಗುರಿ ಸಾಧಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿದ್ದ ವರನ್ನೇ ಮನವೊಲಿಸದಿದ್ದರೆ ಹೇಗೆ? ವೈದ್ಯರೇ ಉತ್ತಮ ರಾಯಭಾರಿಗಳಾಗಿದ್ದು ತಮ್ಮ ವೈದ್ಯಕೀಯ ವಿದ್ಯಾರ್ಥಿಗಳು, ಸಿಬ್ಬಂದಿಗೆ ಮನವೊಲಿಸಿ ಲಸಿಕೆ ಕೊಡಿಸಬೇಕೆಂದರು.

ಬಾಪೂಜಿ ಮೆಡಿಕಲ್ ಕಾಲೇಜಿನ ಡಾ.ಬಾಲು ಮಾತನಾಡಿ ತಮ್ಮ ಸಂಸ್ಥೆಯಿಂದ ನೋಂದಾಯಿಸಲಾದ 3 ಸಾವಿರ ಸಂಖ್ಯೆಯಲ್ಲಿ 600 ವಿದ್ಯಾರ್ಥಿಗಳಿದ್ದಾರೆ. ಈಗ ಪರೀಕ್ಷೆ ನಡೆಯುತ್ತಿರುವುದರಿಂದ ವೈದ್ಯಕೀಯ ವಿದ್ಯಾರ್ಥಿಗಳು ಲಸಿಕೆ ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ. ಪರೀಕ್ಷೆ ಅವರ ಮೊದಲ ಆದ್ಯತೆಯಾಗಿದ್ದು, ಮಾರ್ಚ್ ಅಂತ್ಯದವರೆಗೆ ಪರೀಕ್ಷೆಗಳು ನಡೆಯಲಿವೆ. ಇನ್ನುಳಿದಂತೆ 300 ಜನ ಆಸಕ್ತಿ ಹೊಂದಿದ್ದವರ ಹೆಸರು (2ನೇ ಪುಟಕ್ಕೆ)

**ಕಡಿಮೆ ಪ್ರಗತಿಗೆ ಕಾರಣ**

- ಸಾಫ್ಟ್‌ವೇರ್‌ನಲ್ಲಿ ತಾಂತ್ರಿಕ ತೊಂದರೆ
- ವೈದ್ಯ ವಿದ್ಯಾರ್ಥಿಗಳ ಪರೀಕ್ಷೆ
- ಲಸಿಕೆ ಪಡೆಯಲು ಮುಂದಾಗದ 'ಡಿ'ಗ್ರೂಪ್ ಸಿಬ್ಬಂದಿ

## ಕೆಲಸಗಳಿಗೆ ಲಂಚ ಎಂದು ವರಿಷ್ಠರಿಗೆ ದೂರು

ಬೆಂಗಳೂರು, ಫೆ. 19 - ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆ ಮಾಡಿಸಿಕೊಳ್ಳಲು ನಾವೇ ಲಂಚ ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಡಳಿತಾರೂಢ ಬಿಜೆಪಿ ಶಾಸಕರು ವರಿಷ್ಠರ ಎದುರು ಅಲವತ್ತುಕೊಂಡಿದ್ದಾರೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾಯದರ್ಶಿ ಸಿ.ಟಿ. ರವಿ ಈ ಶಾಸಕರಿಗೆ ಈಗ ಕೇಂದ್ರ ಬಿಂದುವಾಗಿದ್ದಾರೆ.

ನಗರದಲ್ಲಿದ್ದ ಸಂದರ್ಭದಲ್ಲಿ ರವಿ ಸ್ಯಾಂಕಿ ರಸ್ತೆಯ ಸಪ್ತ ಸಚಿವರ ನಿವಾಸದಲ್ಲೇ ಉಳಿದುಕೊಳ್ಳುತ್ತಾರೆ. ವಿಧಾನಸೌಧಕ್ಕೆ ಅಂಟಿಕೊಂಡಂತಿರುವ ಇವರ ಮನೆ ಇದೀಗ ಕಾರ್ಯಕರ್ತರು ಮತ್ತು ಶಾಸಕರಿಗೆ ಸಭೆಯ ಕೇಂದ್ರವಾಗಿ ಪರಿಣಮಿಸಿದೆ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ವಿರುದ್ಧ ಹಾದಿಬೀದಿಯಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಹಿರಂಗವಾಗಿ ಆರೋಪಗಳ ಸುರಿಮಳೆಗೈದರೆ, ನಿಷ್ಠಾವಂತ ಪಕ್ಷದ ಶಾಸಕರು ತಮ್ಮ ಕಷ್ಟ ಸುಖಗಳನ್ನು ಕೇಂದ್ರದ ವರಿಷ್ಠರ ಮುಂದೆ (4ನೇ ಪುಟಕ್ಕೆ)

## ಎಂಸಿಸಿ 'ಬಿ' ಬ್ಲಾಕ್‌ನ ದೂಡಾ ಪಾರ್ಕ್ ಒತ್ತುವರಿ ತೆರವು

ದಾವಣಗೆರೆ, ಫೆ. 19 – ನಗರದ ಎಂ.ಸಿ.ಸಿ. ಬಿ ಬ್ಲಾಕ್‌ನ ನಾಲ್ಕನೇ ಮುಖ್ಯರಸ್ತೆಯ ಒಂಭತ್ತನೇ ತಿರುವಿನಲ್ಲಿರುವ ದೂಡಾ ಪಾರ್ಕ್‌ನಲ್ಲಿ ಅಕ್ರಮ ದಾಖಲೆ ಸೃಷ್ಟಿಸಿ ಒತ್ತುವರಿ ಮಾಡಿದ್ದನ್ನು ಶುಕ್ರವಾರ ತೆರವುಗೊಳಿಸಲಾಗಿದೆ. ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅವರ ನೇತೃತ್ವದಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಈ ಬಗ್ಗೆ ಪತರ್ಕಕರ್ತರಿಗೆ ವಿವರ ನೀಡಿರುವ ಶಿವಕುಮಾರ್, ಸರ್ವೇ ನಂಬರ್ 207/1ಎ4 ರಲ್ಲಿ ದೂಡಾ ಅನುಮತಿ ಪಡೆದು 28 ನಿವೇಶನಗಳ ಬಡಾವಣೆ ರೂಪಿಸಲಾಗಿತ್ತು. ಆದರೆ, ನಂತರ ನಕಲಿ ದಾಖಲೆಗಳನ್ನು ಸೃಷ್ಟಿಸಿ 215x230x12 ಅಡಿ ಜಾಗದಲ್ಲಿದ್ದ ಪಾರ್ಕ್‌ನಲ್ಲಿ ಎರಡು ನಿವೇಶನಗಳನ್ನು ಅಕ್ರಮವಾಗಿ ಸೃಷ್ಟಿಸಲಾಗಿತ್ತು. ಈ ನಿವೇಶನದ ಪೈಕಿ ಒಂದರಲ್ಲಿ ಅಡಿಪಾಯವನ್ನೂ ಹಾಕಲಾಗಿತ್ತು. ಅದನ್ನು ಜೆ.ಸಿ.ಬಿ.ಯಿಂದ ತೆಗೆಸಲಾಗಿದೆ ಎಂದು ತಿಳಿಸಿದರು.

ಪಾರ್ಕ್‌ನ ಇತರೆ ಜಾಗವನ್ನೂ ಸಹ ನಿವೇಶನಗಳೆಂದು ಮಾರಲು ಪ್ರಯತ್ನ ನಡೆಸಿರುವ ಸಾಧ್ಯತೆ ಇದೆ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಪಾರ್ಕ್ ಜಾಗವನ್ನು ದೂಡಾ ವತಿಯಿಂದ ಅಭಿವೃದ್ಧಿ ಪಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಸ್ಥಳೀಯ ರಾಜಮೋಹನ್ ಎಂಬುವವರು, ನಾನೇ ಈ ಹಿಂದೆ ಜಾಗವನ್ನು ಖರೀದಿಸಿ ಅಡಿಪಾಯ ಹಾಕಿದ್ದು. ಆಗ ಪಾಲಿಕೆ ಅಧಿಕಾರಿಗಳು ಮನೆ ಕಟ್ಟಿಕೊಳ್ಳಲು ಅನುಮತಿ ನೀಡಿದ್ದರು. ಆಗ ಅವರ ಬಳಿ ದೂಡಾದ ದಾಖಲೆಗಳು ಇರಲಿಲ್ಲವೇ? ಪಾಲಿಕೆ ಅಧಿಕಾರಿಗಳು ಅನುಮತಿ ನೀಡುವ ಮೂಲಕ ತಪ್ಪು ಮಾಡಿದ್ದು ಅವರ ವಿರುದ್ಧ (2ನೇ ಪುಟಕ್ಕೆ)

## ಮೀಸಲಾತಿ ಬೇಡಿಕೆಗಳ ಬಗ್ಗೆ ಶೀಘ್ರವೇ ತೀರ್ಮಾನ: ಸಿಎಂ

ಬೆಂಗಳೂರು, ಫೆ.19 - ವಿವಿಧ ಸಮುದಾಯಗಳ ಬೇಡಿಕೆಯಂತೆ ಮೀಸಲಾತಿ ಕಲ್ಪಿಸುವ ಸಂಬಂಧ ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರಕಟಿಸಿದ್ದಾರೆ.

ಮೀಸಲಾತಿ ಪರಿಷ್ಕರಿಸುವ ಸಂಬಂಧ ನಿನ್ನೆ ರಾತ್ರಿ ನಡೆದ ಮಂತ್ರಿಮಂಡಲ ಸಭೆಯಲ್ಲಿ ಸಚಿವರು ಮತ್ತು ಅಧಿಕಾರಿಗಳೊಟ್ಟಿಗೆ ಸುದೀರ್ಘ ಚರ್ಚೆ ನಡೆಸಿದ್ದೇನೆ.

ಈ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆದು, ಈ ಸಮುದಾಯದ ಬೇಡಿಕೆಗಳಿಗೆ ಮನ್ನಣೆ ನೀಡುತ್ತೇನೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಂತ್ರಿಮಂಡಲದ ಸಭೆಯಲ್ಲಿ ಸಚಿವರುಗಳು ಮೀಸಲಾತಿಗೆ ಸಂಬಂಧಿಸಿದಂತೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಅದರಿಂದ ಆಗುವ ಬದಲಾವಣೆಗಳ ಬಗ್ಗೆಯು ನನಗೆ ಮನವರಿಕೆ ಮಾಡಿದ್ದಾರೆ. ಈ ಸಂಬಂಧ ಅಧಿಕಾರಿಗಳೊಟ್ಟಿಗೆ ಚರ್ಚೆ ಮಾಡಿದ್ದೇನೆ. ಹೋರಾಟ ನಡೆಸುತ್ತಿರುವ ಸಮುದಾಯಗಳು ತಮ್ಮ ತಮ್ಮ ನಿಲುವಿಗೆ ಅಂಟಿಕೊಂಡಿವೆ ಎಂದವರು ಹೇಳಿದ್ದಾರೆ.

ಕೊರೊನಾ ಸಾಂಕ್ರಾಮಿಕ ರೋಗದ ಸಂಕಷ್ಟದ ನಡುವೆಯೂ ಮಾರ್ಚ್ 8 ರಂದು ಮುಂಗಡ ಪತ್ರವನ್ನು ಮಂಡಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಈಗಾಗಲೇ ಬಜೆಟ್ ಸಿದ್ದತೆಗಳು (2ನೇ ಪುಟಕ್ಕೆ)

**ಯಾವುದೇ ಸಮುದಾಯಕ್ಕೂ ಅನ್ಯಾಯವಾಗದಂತೆ ಮೀಸಲಾತಿ ನೀಡುವ ನಿರ್ಧಾರವನ್ನು ಕೈಗೊಳ್ಳಬೇಕು. ರಾಜ್ಯ ತೆಗೆದುಕೊಳ್ಳುವ ನಿರ್ಧಾರಗಳಿಗೆ ಕೇಂದ್ರದ ಸಹಕಾರವೂ ಅಗತ್ಯವಿದೆ. ಇದನ್ನು ಗಮನದಲ್ಲಿಟ್ಟುಕೊಂಡು, ಸಂವಿಧಾನದ ಚೌಕಟ್ಟಿನಲ್ಲೇ ಮತ್ತು ಕಾನೂನು ಇತಿಮಿತಿಯಲ್ಲಿ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.**

## ಏಪ್ರಿಲ್ ಮೊದಲ ವಾರ ನೂತನ ರೈಲ್ವೇ ನಿಲ್ದಾಣ ಉದ್ಘಾಟನೆ

ದಾವಣಗೆರೆ, ಫೆ. 19 – ನವೀಕೃತ ರೈಲ್ವೆ ನಿಲ್ದಾಣದ ಉದ್ಘಾಟನೆಯನ್ನು ಮಾರ್ಚ್ 27 ಇಲ್ಲವೇ ಏಪ್ರಿಲ್ 3-4ರಂದು ನೆರವೇರಿಸಲಾಗುವುದು ಎಂದು ಸಂಸದ ಜಿ.ಎಂ.ಸಿದ್ದೇಶ್ವರ ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣ ನವೀಕರಣ ಕಾಮಗಾರಿ ಪರಿಶೀಲಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಕಾಮಗಾರಿ ಶೇ.80ರಷ್ಟು ಪೂರ್ಣಗೊಂಡಿದೆ. ಉಳಿದ ಕಾಮಗಾರಿ ಇನ್ನು 20-25 ದಿನಗಳಲ್ಲಿ ಪೂರ್ಣವಾಗಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ ಎಂದರು.

ಎಸ್ಕಲೇಟರ್‌ಗೆ 5 ಕೋಟಿ ರೂ. ಸೇರಿದಂತೆ ಒಟ್ಟು 20 ಕೋಟಿ ರೂ. ವೆಚ್ಚದಲ್ಲಿ ನವೀಕರಣ ಕಾಮಗಾರಿ ಪೂರ್ಣಗೊಳ್ಳುತ್ತಿದೆ. ಸುಂದರ ಹಾಗೂ ವಿಶಾಲವಾದ ನಿಲ್ದಾಣ ರೂಪುಗೊಂಡಿದೆ ಎಂದು ಹೇಳಿದರು.

ಮಂಡಿಪೇಟೆ ಕಡೆಯ ಎರಡನೇ ಪ್ರವೇಶ ದ್ವಾರ ಸುಂದರವಾಗಿ ಕಾಣಲು ಅಲ್ಲಿ ಅಡ್ಡವಾಗಿರುವ ಪಾಲಿಕೆಯ 8-9 ಅಂಗಡಿಗಳನ್ನು ತೆರವುಗೊಳಿಸಲು ಪಾಲಿಕೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.





ಡಿಸಿಎಂ ಲೇಔಟ್ ಬಳಿಯ ಕ್ರಾಸಿಂಗ್‌ನಲ್ಲಿ ರಸ್ತೆ ನೇರಗೊಳಿಸುವ ಕಾಮಗಾರಿಯೂ ಪೂರ್ಣಗೊಳ್ಳುವ ಹಂತಕ್ಕೆ ತಲುಪಿದ್ದು, ಮಾರ್ಚ್ 20ರ ಒಳಗೆ ಕೆಲಸ ಮುಗಿಯಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ರೈಲ್ವೆ ನಿಲ್ದಾಣದ ಜೊತೆಗೆ ಅದನ್ನೂ ಉದ್ಘಾಟಿಸಲಾಗುವುದು ಎಂದವರು (2ನೇ ಪುಟಕ್ಕೆ)

### ಈ ಬಾರಿಯೂ ಪಾಲಿಕೆ ಬಿಜೆಪಿಗೆ : ಸಿದ್ದೇಶ್ವರ

ಮುಂಬರುವ ಫೆ.24ರಂದು ನಡೆಯಲಿರುವ ಪಾಲಿಕೆ ಮೇಯರ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯೇ ಆಯ್ಕೆಯಾಗಲಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪರಿಷತ್ ಸದಸ್ಯರನ್ನು ಪಾಲಿಕೆಯ ಮತದಾರರ ಪಟ್ಟಿಗೆ ಸೇರಿಸಿರುವುದಕ್ಕೆ ಕಾಂಗ್ರೆಸ್ ಮಾಡಿರುವ ಆಕ್ಷೇಪ ತಳ್ಳಿ ಹಾಕಿದ ಅವರು, ಅವರು ಆರೋಪ ಮಾಡುತ್ತಲೇ ಇರುತ್ತಾರೆ, ನಾವು ಮೇಲಕ್ಕೇಳುತ್ತಲೇ ಇರುತ್ತೇವೆ. ಕಳೆದ ಬಾರಿಯಂತೆಯೇ ಈ ಬಾರಿಯೂ ಬಿಜೆಪಿ ಗೆಲ್ಲಲಿದೆ ಎಂದರು. ಮುಂದಿನ ಮೇಯರ್ ಯಾರಾಗಬೇಕು ಎಂಬುದನ್ನು ಪಕ್ಷದ ನಾಯಕರ ಕೋರ್ (2ನೇ ಪುಟಕ್ಕೆ)


ಅಪೋಲೊ ಕ್ಯಾನ್ಸರ್ ಸೆಂಟರ್ಸ್ ತಜ್ಞವೈದ್ಯರು ದಾವಣಗೆರೆಯಲ್ಲಿ ಲಭ್ಯರಿರುತ್ತಾರೆ

Apollo Cancer Centres





ಡಾ|| ಸಿ. ಎನ್. ಪಾಟೀಲ್
MD (General Medicine), DM (Medical Oncology)
ಹಿರಿಯ ಕ್ಯಾನ್ಸರ್ ತಜ್ಞರು, ಅಪೋಲೊ ಹಾಸ್ಪಿಟಲ್ಸ್, ಬೆಂಗಳೂರು

ನೀವೇನಾದರು ಕೆಳಕಂಡ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಕ್ಯಾನ್ಸರ್ ತಜ್ಞರನ್ನು ಭೇಟಿ ಮಾಡಿ

- ಕ್ಯಾನ್ಸರ್ ಹೊಂದಿರುವ ಅಥವಾ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವವರು
- ಸ್ತನಗಳಲ್ಲಿ ಗಂಟು ಹೊಂದಿರುವ ಮಹಿಳೆಯರು
- ನುಂಗಲು ಕಷ್ಟವಾಗುತ್ತಿರುವವರು
- ಕಫ ಮತ್ತು ಎಂಜಲಲ್ಲಿ ರಕ್ತ ಬರುತ್ತಿದ್ದರೆ
- ವಿಲಕ್ಷಣ ಜ್ವರ ಹಾಗೂ ದೇಹದ ತೂಕ ನಷ್ಟವಾಗುತ್ತಿದ್ದರೆ
- ವಾಸಿಯಾಗದ ಅಲ್ಸರ್

ಭಾನುವಾರ, 21 ಫೆಬ್ರವರಿ 2021
ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ

ಸ್ಪಂದನ ಯೂರಾಲಜಿ ಸೆಂಟರ್
ಐಸಿರಿ, 8ನೇ ಮೇಯಿನ್, ಕೃಷ್ಣ ಬೇಕರಿ ಹತ್ತಿರ, ಅರುಣ ಟಾಕೀಸ್ ರಸ್ತೆ, ದಾವಣಗೆರೆ – 577002

ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ 08192-233023 / 96864 44448

ಅಪೋಲೋ ಹಾಸ್ಪಿಟಲ್ಸ್, 154/11, ಐಐಎಂ ಎದುರು, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 076

# ಹೆಚ್ಚಿನ ಅನುದಾನ ಬಿಡುಗಡೆಗೆ ಸದಸ್ಯರು ಶ್ರಮಪಡಬೇಕು

## ಹರಿಹರ ನಗರಸಭೆ ಆಯವ್ಯಯದ ವಿಶೇಷ ಅಭಿವೃದ್ಧಿ ಯೋಜನೆಗಳ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿಗಳ ಕರೆ

ಹರಿಹರ, ಫೆ.19- ನಗರಸಭೆ ಸದಸ್ಯರು ಸರ್ಕಾರದ ಮೇಲೆ ಒತ್ತಡವನ್ನು ಹಾಕಿ ಹಣವನ್ನು ಬಿಡುಗಡೆ ಮಾಡಿಸಿದಾಗ ನಗರದ ಅಭಿವೃದ್ಧಿಗೆ ಪೂರಕ ಕಾರ್ಯಗಳನ್ನು ಮಾಡಲು ಸಾಧ್ಯವಾಗಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅಭಿಪ್ರಾಯಪಟ್ಟರು.

ನಗರಸಭೆ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ 2021-22 ನೇ ಸಾಲಿನ ಆಯವ್ಯಯದ ಪ್ರಮುಖ ಅಂಕಿ-ಅಂಶಗಳ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಡಿಯುವ ನೀರು, ಸ್ವಚ್ಛತೆ, ವಾಹನ ನಿಲುಗಡೆ, ವಿದ್ಯುತ್ ದೀಪಗಳ ಆಳವಡಿಕೆ, ರಂಗಮಂದಿರ ನಿರ್ಮಾಣ, ಸುಸಜ್ಜಿತ ಹಣ್ಣು, ತರಕಾರಿ, ಹೂವು ಮಾರುಕಟ್ಟೆ ನಿರ್ಮಾಣ, ಹಂದಿ ಹಾಗೂ ಬಿಡಾಡಿ ದನಗಳ ಹಾವಳಿ ತಡೆಗಟ್ಟುವಿಕೆ, ಕಸದ ಬುಟ್ಟಿ ವಿತರಣೆ, ಐತಿಹಾಸಿಕ ಪ್ರವಾಸಿ ಕೇಂದ್ರ ಆಗಬೇಕು, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಜಗಜೀವನ್ ರಾಮ್ ಭವನ ನಿರ್ಮಾಣ, ದೇಶದ ಒಳಿತಿಗಾಗಿ ಶ್ರಮಿಸಿರುವ ವ್ಯಕ್ತಿಗಳ ಪುತ್ಥಳಿ ನಿರ್ಮಾಣ, ನೂತನ ನಗರಸಭೆ ಕಟ್ಟಡ ನಿರ್ಮಾಣ, ಕನ್ನಡ ಭವನ, ಪತ್ರಕರ್ತರ ಭವನ, ವಿವಿಧ ರಸ್ತೆಯಲ್ಲಿ ನಾಮ ಫಲಕಗಳ ಅಳವಡಿಕೆ ಮುಂತಾದ ಹಲವಾರು ಕಾಮಗಾರಿಗಳ ಕುರಿತು ಸಾರ್ವಜನಿಕರು, ಜನ ಪ್ರತಿನಿಧಿಗಳು ತಿಳಿಸಿದ್ದಾರೆ.



ಯಾವುದೇ ರೀತಿಯಲ್ಲಿ ನಗರವು ಅಭಿವೃದ್ಧಿ ಹೊಂದಬೇಕಾದರೆ ಅದಕ್ಕೆ ಪೂರಕವಾಗಿ ಹಣದ ಅವಶ್ಯಕತೆ ಇರುವುದರಿಂದ ಆದಾಯ ಹೆಚ್ಚಿನ ಪ್ರಮಾಣದಲ್ಲಿ ನಗರಸಭೆಗೆ ಹರಿದು ಬರುವ ನಿಟ್ಟಿನಲ್ಲಿ ಮೊದಲ ಆದ್ಯತೆಯನ್ನು ನೀಡಿ. ಅದನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿ ನಗರದ ಜನತೆಗೆ ಮೂಲಭೂತ ಸೌಕರ್ಯಗಳ ಕೊರತೆ ಬರದ ರೀತಿಯಲ್ಲಿ ಈ ಸಾಲಿನ ಆಯವ್ಯಯ ಮಾಡಿ ಅಭಿವೃದ್ಧಿ ಮಾಡಲಾಗುತ್ತದೆ. ಇದಕ್ಕೆ ಸಾರ್ವಜನಿಕರು ಸಹ ಅಷ್ಟೇ ಉತ್ತಮವಾದ ಸಹಕಾರ ನೀಡಬೇಕೆಂದು ಹೇಳಿದರು.

ಪತ್ರಕರ್ತ ಶೇಖರಗೌಡ ಮಾತನಾಡಿ, ಕಳೆದ ಸಾಲಿನಲ್ಲಿ ಬಜೆಟ್ ಮಂಡಿಸಿದ ಸಮಯದಲ್ಲಿ ಅನೇಕ ಯೋಜನೆಯನ್ನು ಜಾರಿಗೆ ತರುವುದಕ್ಕೆ ವ್ಯವಸ್ಥೆ ಮಾಡಲಾಯಿತು. ಆದರೆ ಅವುಗಳಲ್ಲಿ ಒಂದೂ ಸಹ ಆಡಳಿತಾತ್ಮಕವಾಗಿ ಜಾರಿಗೆ ಬಂದಿಲ್ಲ . ಕೇವಲ ಲೆಕ್ಕ ಪುಸ್ತಕಕ್ಕೆ ಮಾತ್ರ ಸೀಮಿತವಾಗಿ ಬಜೆಟ್ ಮಾಡಲಾಗಿದೆ. ದಾವಣಗೆರೆ ಹಿಡಿತದಲ್ಲಿ ಇರುವ ಅಗಸನಕಟ್ಟೆ ಮತ್ತು ದಾವಣಗೆರೆ ವಾಟರ್ ವರ್ಕ್ಸ್ ಸ್ಥಳವನ್ನು ನಗರಸಭೆಗೆ ಹಸ್ತಾಂತರ ಮಾಡುವ ಮೂಲಕ ಇಲ್ಲಿನ ಜನತೆಗೆ ಅನುಕೂಲ ಮಾಡಬೇಕು.

ಜೆಡಿಎಸ್ ಪಕ್ಷದ ಮುಖಂಡ ಅಂಗಡಿ ಮಂಜುನಾಥ್, ದೂಡ ಮಾಜಿ ಸದಸ್ಯ ಹೆಚ್. ನಿಜಗುಣ, ನಗರಸಭೆ ಮಾಜಿ ಸದಸ್ಯ ಜಿ .ವಿ. ವೀರೇಶ್, ಹಬೀಬುಲ್ಲಾ, ನಗರಸಭೆ ಸದಸ್ಯರಾದ ಗುತ್ತೂರು ಜಂಬಣ್ಣ, ಹನುಮಂತಪ್ಪ, ಮೋಹನ್ ದುರುಗೋಜಿ, ದಾದಾಪೀರ್ ಭಾನುವಳ್ಳಿ, ಅಮ್ಜದ್ ಅಲಿ, ಹೆಚ್.ಕೆ. ಕೊಟ್ರಪ್ಪ, ಪತ್ರಕರ್ತ ಹೆಚ್. ಸುಧಾಕರ್, ಕೆ. ಮರಿದೇವ, ಪತ್ರಕರ್ತ ಚಿದಾನಂದ ಕಂಚಿಕೇರಿ, ಅಲಿ, ಮಂಜುಳಾ ಇನ್ನಿತರರು ವಿವಿಧ ವಿಷಯಗಳ ಕುರಿತು ಸಭೆಯ ಗಮನ ಸೆಳೆದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತ ಉದಯ ಕುಮಾರ್ ತಳವಾರ್, ಎಇಇ ಬಿರಾದಾರ, ನಗರಸಭೆ ಸದಸ್ಯರಾದ ಉಷಾ ಮಂಜುನಾಥ್, ಅಶ್ವಿನಿ ಕೃಷ್ಣ, ನಿಂಬಕ್ಕ ಚಂದಪೂರ್, ಕೆ.ಜಿ. ಸಿದ್ದೇಶ್, ಎಂ.ಎಸ್. ಬಾಬುಲಾಲ್, ಮೆಹಬೂಬ್ ಬಾಷಾ, ಮುಜಾಮಿಲ್ ಬಿಲ್ಲು, ದಾದಾ ಖಲಂದರ್, ನೀತಾ ಮೆಹರ್ವಾಡೆ, ನಾಗರತ್ನ, ಪಕ್ಕೀರಮ್ಮ, ಉಷಾ ಮೋಹನ್ ಮತ್ತಿತರರು ಹಾಜರಿದ್ದರು.

> ನಗರಸಭೆ ಅಂದು ಹೇಗಿತ್ತೋ ಇಂದು ಸಹ ಹಾಗೆಯೇ ಇದೆ. ಹಿಂದೆ ಮ್ಯಾನ್ಯುಯಲ್ ವರ್ಕ್ ಆಗಿದ್ದರೂ ಬೇಗನೆ ಕೆಲಸ ಆಗುತ್ತಿತ್ತು. ಆದರೆ ಈಗ ಎಲ್ಲಾ ಕೆಲಸವನ್ನು ಕಂಪ್ಯೂಟರ್ ಮಾಡುತ್ತಿದ್ದರೂ, ಒಂದು ದಾಖಲೆ ಪಡೆಯಲು ಆರು ತಿಂಗಳು ಬೇಕಾಗುತ್ತಿದೆ.
> - ಎ. ವಾಮನಮೂರ್ತಿ, ನಗರಸಭೆ ಸದಸ್ಯ

> ಕಳೆದ ಸಾಲಿನ ಬಜೆಟ್‌ನಲ್ಲಿ ಜಾರಿ ಮಾಡಿರುವ ಅನೇಕ ಕೆಲಸ ಕಾರ್ಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದರ ಪರಿಣಾಮವಾಗಿ ನಗರವು ಯಾವುದೇ ರೀತಿಯ ಅಭಿವೃದ್ಧಿ ಕಾಣದಾಗಿದೆ. ಸಾರ್ವಜನಿಕರು ಕಟ್ಟಡ ಲೈಸೆನ್ಸ್, ಅಂಗಡಿ ಪರವಾನಗಿ ಪತ್ರ, ಖಾತೆ ಎಕ್ಸ್‌ಟ್ರಾಕ್ಟ್ ಪಡೆಯಲು ಹರಸಾಹಸ ಪಡಬೇಕಾಗಿದೆ. ನಗರಸಭೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಚಾಟಿ ಬೀಸುವ ಮೂಲಕ ಉತ್ತಮ ಆಡಳಿತ ವ್ಯವಸ್ಥೆ ತರಬೇಕು ಎಂದು ಹೇಳಿದರು.
> - ಶಂಕರ್ ಖಟಾವ್‌ಕರ್, ನಗರಸಭೆ ಸದಸ್ಯ

## ಹಡಗಲಿ : ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರೆಗೆ ಚಾಲನೆ



ಹೂವಿನಹಡಗಲಿ, ಫೆ.19 - ತಾಲ್ಲೂಕಿನ ಸುಕ್ಷೇತ್ರ ಮೈಲಾರದಲ್ಲಿ ರಥಸಪ್ತಮಿ ದಿನವಾದ ಶುಕ್ರವಾರ ಕಾರಣಿಕ ನುಡಿಯುವ ಗೊರವಯ್ಯಗೆ ಕಂಕಣ ಕಟ್ಟುವ ಮೂಲಕ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರೆಗೆ ಚಾಲನೆ ನೀಡಲಾಯಿತು.

ಮೈಲಾರ ದೇವಸ್ಥಾನದಲ್ಲಿ ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಸಂಪ್ರದಾಯದಂತೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ದೇವಸ್ಥಾನದ ಪ್ರಾಂಗಣದಲ್ಲಿ ಅರ್ಚಕ ಪ್ರಮೋದ್ ಭಟ್‌ರ ಮಂತ್ರಘೋಷ ಹಾಗೂ ಪೂಜಾ ವಿಧಿ, ವಿಧಾನಗಳೊಂದಿಗೆ ಕಾರಣಿಕ ತದನಂತರ ಹಾಲು ಉಕ್ಕಿಸುವ ಕಾರ್ಯಕ್ರಮ ನಡೆಯಿತು. ಹಾಲು ಯಾವ ಭಾಗದಲ್ಲಿ ಉಕ್ಕುತ್ತದೆಯೋ ಆ ಕಡೆ ಸಮೃದ್ಧ ಮಳೆ ಬೆಳೆ ಆಗುವುದು ಎಂಬ ಪ್ರತೀತಿ ಇದೆ. ಅದರಂತೆ ಈ ಬಾರಿ ಹೊಳಲು ಭಾಗದ ಕಡೆಗೆ ಬೆಳೆ ಆಗಲಿದೆ ಎಂದು ಅರ್ಚಕರು ತಿಳಿಸಿದರು.

ಈ ವೇಳೆ ನೆರೆದ ಭಕ್ತರರು ಏಳುಕೋಟಿ, ಏಳುಕೋಟಿಗೆ ಚಾಂಗಮಲೋ ಎಂದು ಜಯ ಘೋಷ ಕೂಗಿದರು. ಧಾರ್ಮಿಕ ದತ್ತಿ ಪ್ರಾಂಗಣದಲ್ಲಿ ಅರ್ಚಕ ಪ್ರಮೋದ್ ಭಟ್‌ರ ಮಂತ್ರಘೋಷ ಹಾಗೂ ಪೂಜಾ ವಿಧಿವಿಧಾನಗಳೊಂದಿಗೆ ಕಾರಣಿಕ ನುಡಿಯುವ ರಾಮಣ್ಣ ಗೊರವಯ್ಯ ಹಾಗೂ ಬಾಬುದಾರರಿಗೆ ಧರ್ಮಕರ್ತರು ಕಂಕಣಕಟ್ಟಿ ಅಧಿಕೃತವಾಗಿ ಜಾತ್ರೆಗೆ ಚಾಲನೆ ನೀಡಿದರು.

## ನಿಟ್ಟೂರಿನಲ್ಲಿ ಇಂದು ಗ್ರಾಮ ವಾಸ್ತವ್ಯ

ಮಲೇಬೆನ್ನೂರು, ಫೆ.19 - ಮಲೇಬೆನ್ನೂರು ಸಮೀಪದ ನಿಟ್ಟೂರು ಗ್ರಾಮದಲ್ಲಿ ಇಂದು ತಾಲ್ಲೂಕು ಆಡಳಿತ ಗ್ರಾಮ ವಾಸ್ತವ್ಯ ಮಾಡಲಿದ್ದು, ಜನರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸುವ ಚಿಂತನೆಯಿಂದ ಕಂದಾಯ ಸಚಿವ ಆರ್. ಅಶೋಕ್ ಪ್ರತಿ ತಿಂಗಳು 3 ನೇ ಶನಿವಾರ ಕಂದಾಯ ಇಲಾಖೆ ಅಧಿಕಾರಿಗಳು ಗ್ರಾಮ ವಾಸ್ತವ್ಯದ ಮೂಲಕ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಈ ಕಾರ್ಯಕ್ರಮ ರೂಪಿಸಿದ್ದಾರೆ. ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಉಪತಹಶೀಲ್ದಾರ್ ಆರ್.ರವಿ ಗ್ರಾಮ ವಾಸ್ತವ್ಯದ ನೇತೃತ್ವ ವಹಿಸಿದ್ದಾರೆ.

# ನೂತನ ರೈಲ್ವೇ ನಿಲ್ದಾಣ ಉದ್ಘಾಟನೆ

(1ನೇ ಪುಟದಿಂದ) ಹೇಳಿದರು.

ಉಪ ವಿಭಾಗೀಯ ಕಚೇರಿಯನ್ನು ಎರಡು ತಿಂಗಳಲ್ಲಿ ತಾತ್ಕಾಲಿಕವಾಗಿ ಬೇರೆಡೆ ಸ್ಥಳಾಂತರಿಸಿ ಆ ಜಾಗವನ್ನು ರೈಲ್ವೆಗೆ ವಹಿಸಲಾಗುವುದು. ಈ ಜಾಗದಲ್ಲಿ ಪ್ರವೇಶ ಹಾಗೂ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗುವುದು. ಈ ಕಾಮಗಾರಿ ಸೇರಿದಂತೆ ರೈಲ್ವೆ ನಿಲ್ದಾಣಕ್ಕೆ ಎರಡನೇ ಮಹಡಿ ನಿರ್ಮಿಸುವ ಎರಡನೇ ಹಂತದ ಕಾಮಗಾರಿಗೆ ಪ್ರಸ್ತಾವನೆ ಕಳಿಸಲಾಗುವುದು ಎಂದವರು ತಿಳಿಸಿದರು.

ಹರಿಹರ ರೈಲ್ವೆ ನಿಲ್ದಾಣವನ್ನೂ ಸಹ ಉನ್ನತೀಕರಿಸುವ ಪ್ರಸ್ತಾವನೆ ಇದೆ. ಕೊರೊನಾ ಕಾರಣದಿಂದಾಗಿ ಈ ಪ್ರಸ್ತಾವನೆ ವಿಳಂಬವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ಶೀಘ್ರದಲ್ಲೇ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ಮೆಡಿಕಲ್ ಕಾಲೇಜ್ ಬೇಡಿಕೆ** : ಮುಂಬರುವ ರಾಜ್ಯ ಬಜೆಟ್‌ನಲ್ಲಿ ದಾವಣಗೆರೆಗೆ ವೈದ್ಯಕೀಯ ಕಾಲೇಜು, ಕತ್ತಲಗೆರೆ ಫಾರಂಗೆ ಕೃಷಿ ಕಾಲೇಜು, ಹಾಲು ಉತ್ಪಾದಕರ ಒಕ್ಕೂಟ ವಿಭಜನೆ ಮಾಡಿ ದಾವಣಗೆರೆ ಪ್ರತ್ಯೇಕ ಒಕ್ಕೂಟ ಮಾಡಿಕೊಡುವಂತೆ ತಾವು ಹಾಗೂ ಜಿಲ್ಲೆಯ ಬಿಜೆಪಿ ಶಾಸಕರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಳಿ ಮನವಿ ಮಾಡಿಕೊಂಡಿರುವುದಾಗಿ ಇದೇ ಸಂದರ್ಭದಲ್ಲಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ಬಿ.ಜಿ ಅಜಯ್ ಕುಮಾರ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ರೈಲ್ವೆ ಇಲಾಖೆ ಮೈಸೂರು ವಿಭಾಗದ ಡಿ.ಆರ್.ಎಂ. ರಾಹುಲ್ ಅಗರ್‌ವಾಲ್ ಮತ್ತಿತರರು ಉಪಸ್ಥಿತರಿದ್ದರು.

## ಪಾಲಿಕೆ ಬಿಜೆಪಿಗೆ : ಸಿದ್ದೇಶ್ವರ

(1ನೇ ಪುಟದಿಂದ) ಕಮಿಟಿ ಫೆ.23ರ ರಾತ್ರಿ ನಿರ್ಧರಿಸಲಿದೆ. ಪಾಲಿಕೆಯ ಎಲ್ಲ ಬಿಜೆಪಿ ಸದಸ್ಯರು ಒಗ್ಗಟ್ಟಾಗಿದ್ದಾರೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

## ಸಿದ್ಧ ಸಮಾಧಿ ಯೋಗ ಪರಿಚಯ

ದಾವಣಗೆರೆ, ಫೆ.19- ನಗರದ ರಾಂ ಅಂಡ್ ಕೋ ವೃತ್ತದಲ್ಲಿರುವ ಶ್ರೀ ಗಣಪತಿ ದೇವಸ್ಥಾನದ ಮಹಡಿ ಮೇಲೆ ಸಿದ್ಧ ಸಮಾಧಿ ಯೋಗ ಕುರಿತ ಪರಿಚಯ ಕಾರ್ಯಕ್ರಮವು ನಾಡಿದ್ದು ದಿನಾಂಕ 21ರ ಭಾನುವಾರ ಸಂಜೆ 6ಕ್ಕೆ ನಡೆಯಲಿದೆ.

ಸೂರ್ಯ ನಮಸ್ಕಾರ, ಪ್ರಾಣಾ ಯಾಮ, ಧ್ಯಾನ, ಆಹಾರ ಪದ್ಧತಿ, ಪಂಚಕೋಶ ಶುದ್ಧೀಕರಣ, ವ್ಯಕ್ತಿತ್ವ ವಿಕಸನ ಆರೋಗ್ಯ ಮತ್ತು ಆನಂದ ಕ್ಕಾಗಿ ಸಿದ್ಧ ಸಮಾಧಿ ಯೋಗ ಸಹಕಾರಿ ಎಂದು ರೇಣುಕಾ ಮಾತಾಜಿ (94486 67523, 9663344960) ತಿಳಿಸಿದ್ದಾರೆ.

# ಕೊರೊನಾ ಲಸಿಕಾಕರಣ ದಾವಣಗೆರೆಗೆ 13ನೇ ಸ್ಥಾನ

(1ನೇ ಪುಟದಿಂದ) ಪೋರ್ಟಲ್‌ನಲ್ಲಿ ಬಂದಿಲ್ಲ. ಜೊತೆಗೆ ಸಾಫ್ಟ್‌ವೇರ್‌ನಲ್ಲಿ ತಾಂತ್ರಿಕ ತೊಂದರೆಗಳು ಕಾಣಿಸುತ್ತಿವೆ. ಇದನ್ನು ಸರಿಪಡಿಸಬೇಕು. ಜೊತೆಗೆ ಆಸಕ್ತರನ್ನು ಸೇರಿಸಲು ಅವಕಾಶ ಮಾಡಿಕೊಡಬೇಕು. ಹಾಗೂ ಪರೀಕ್ಷೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಗಿದ ಮೇಲೆ ಲಸಿಕೆ ಹಾಕಿಸಿಕೊಳ್ಳಲು ಕಾಲಾವಕಾಶ ನೀಡಬೇಕೆಂದರು.

ಎಸ್‌ಎಸ್ ಮೆಡಿಕಲ್ ಕಾಲೇಜಿನ ಡಾ. ಅಶ್ವಿನ್ ಮಾತನಾಡಿ, ಸಾಫ್ಟ್‌ವೇರ್‌ನಲ್ಲಿ 2ನೇ ಡೋಸ್‌ಗೆ ಅಲಾಟ್ ಆಗುವಲ್ಲಿ ತಾಂತ್ರಿಕ ದೋಷವಿದೆ. ಜೊತೆಗೆ ಪ್ರಮಾಣ ಪತ್ರ ಜನರೇಟ್ ಆಗುತ್ತಿಲ್ಲ. ಈ ಸಾಫ್ಟ್‌ವೇರ್ ಸಮಸ್ಯೆಯನ್ನು ಸರಿಪಡಿ ಸಬೇಕು. ಹಾಗೂ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುತ್ತಿದ್ದು ಇವರಿಗೆ ನಂತರ ಅವಕಾಶ ಕೊಡಬೇಕು. ಇತರೆ ಸಿಬ್ಬಂದಿ ಮತ್ತು ಡಿ ಗ್ರೂಪ್ ಸಿಬ್ಬಂದಿಗಳಿಗೆ ವೈಯಕ್ತಿಕವಾಗಿ ಕರೆದು ಮನವೊಲಿಸಿದರೂ ಲಸಿಕೆಗೆ ಅವರು ಮುಂದಾಗುತ್ತಿಲ್ಲವೆಂದರು.

ವಿವಿಧ ತಾಲ್ಲೂಕುಗಳ ತಾಲ್ಲೂಕು ವೈದ್ಯಾಧಿಕಾರಿಗಳಿಂದ ಲಸಿಕಾ ಕರಣದ ಪ್ರಗತಿ ಮಾಹಿತಿ ಪಡೆದ ಸಿಇಓ, ದಾವಣಗೆರೆಯಲ್ಲಿ ಶೇ.77, ಜಗಳೂರು ಶೇ.70, ಹರಿಹರ ಶೇ.51, ಹೊನ್ನಾಳಿ ಶೇ.75, ಚನ್ನಗಿರಿಯಲ್ಲಿ ಶೇ.77 ಪ್ರಗತಿ ಆಗಿದೆ. ಅಧಿಕಾರಿಗಳು ಸಿಬ್ಬಂದಿಗಳ ಮನವೊಲಿಸಿ ಶೇ.100 ಪ್ರಗತಿ ಸಾಧಿಸಲು ಪರಿಣಾಮಕಾರಿ ಕ್ರಮಗಳನ್ನು ಅನುಸರಿಸಬೇಕು ಎಂದರು.

ಚಿಗಟೇರಿ ಆಸ್ಪತ್ರೆಯಲ್ಲಿ ಕೋವ್ಯಾಕ್ಸಿನ್‌ಗೆ ಒಪ್ಪಿಗೆ ಪತ್ರ ನೀಡಬೇಕೆಂದು ಕೆಲವರು ಲಸಿಕೆಗೆ ಮುಂದಾಗುತ್ತಿಲ್ಲ. ಈ ಬಗ್ಗೆ ಅಧೀಕ್ಷಕರು ಲಸಿಕೆಯ ಬಗ್ಗೆ ಭಯ ಹೋಗಲಾಡಿಸಿ ಲಸಿಕೆ ಹಾಕಿಸಲು ಕ್ರಮ ವಹಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕರು ಅಂಗನವಾಡಿ ಸೂಪರ್‌ವೈಸರ್, ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ತಿಳಿ ಹೇಳಿ ಲಸಿಕೆ ಕೊಡಿಸಬೇಕು. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಶೇ.80 ಲಸಿಕೆ ಪಡೆದರೂ ಇನ್ನುಳಿದವರು ಪಡೆಯಬೇಕು. ಅವರೇ ಪಡೆಯದಿದ್ದರೆ ಅಂಗನವಾಡಿ ಶುರುವಾಗುವುದು ಹೇಗೆ ಎಂದ ಅವರು ಡಿಡಿಯವರು ಸಂಬಂಧಿಸಿದವರ ಸಭೆ ಕರೆದು ತಿಳಿಸಿ ಹೇಳಬೇಕು. ಲಸಿಕೆಯ ಗಂಭೀರತೆಯನ್ನು ಎಲ್ಲರೂ ಅರಿತು ಲಸಿಕೆ ಪಡೆಯಬೇಕೆಂದರು.

ಎಎಸ್‌ಪಿ ರಾಜೀವ್ ಮಾತನಾಡಿ, ಈ ನಡುವೆ ಪೊಲೀಸರಿಗೆ ಬಂದೋಬಸ್ತ್ ಕಾರ್ಯ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಪ್ರಗತಿ ಸ್ವಲ್ಪ ಕಡಿಮೆಯಾಗಿದೆ. ಇಂದಿನಿಂದ ಲಸಿಕಾಕರಣ ಚುರುಕಾಗಿದ್ದು ಇಂದು 228 ಪೊಲೀಸ್ ಸಿಬ್ಬಂದಿ ಲಸಿಕೆ ಪಡೆದಿದ್ದು, ನಿಗದಿತ ಗುರಿ ಸಾಧಿಸಲಾಗುವುದು ಎಂದರು.

ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮಾತನಾಡಿ, ಕೋವಿಡ್ ಲಸಿಕೆ ಸಾಫ್ಟ್‌ವೇರ್ ದೇಶಾದ್ಯಂತ ಒಂದೇ ಆಗಿದ್ದು, ಎಲ್ಲೆಡೆ ಸಾಫ್ಟ್‌ವೇರ್ ಕುರಿತು ಕೆಲವು ಸಮಸ್ಯೆ ಇದ್ದು, ರಾಜ್ಯ ಸರ್ಕಾರ ಈ ಬಗ್ಗೆ ಕೇಂದ್ರದ ಗಮನ ಸೆಳೆದಿದೆ. ಹೊಸ ಸೇರ್ಪಡೆ ಮತ್ತು ತಾಂತ್ರಿಕ ಸಮಸ್ಯೆಗಳನ್ನು ನಿರ್ವಹಿಸಲು ಪ್ರಯತ್ನಿಸಲಾಗುವುದು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಸಿಇಓ ಡಾ.ವಿಜಯ ಮಹಾಂತೇಶ ದಾನಮ್ಮನವರ್, ಡಿಹೆಚ್‌ಓ ಡಾ.ನಾಗರಾಜ್ ಸೇರಿದಂತೆ ಅಧಿಕಾರಿಗಳು ತೀವ್ರತರವಾದ ಮಿಷನ್ ಇಂದ್ರಧನುಷ್ 3.0 ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು.

ಸಭೆಯಲ್ಲಿ ಡಿಹೆಚ್‌ಓ ಡಾ.ನಾಗರಾಜ್, ಚಿಗಟೇರಿ ಆಸ್ಪತ್ರೆ ಅಧೀಕ್ಷಕ ಡಾ.ಜಯಪ್ರಕಾಶ್, ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ.ಗಂಗಾಧರ್, ಡಾ.ನಟರಾಜ್, ಡಾ.ರೇಣುಕಾರಾಧ್ಯ, ಡಾ. ಮುರಳೀಧರ, ನಗರಾಭಿವೃದ್ದಿ ಕೋಶದ ಎಇಇ ವಸಂತಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಡಿಡಿ ವಿಜಯಕುಮಾರ್, ತಾಲ್ಲೂಕು ವೈದ್ಯಾಧಿಕಾರಿಗಳಾದ ಡಾ.ವೆಂಕಟೇಶ್, ಡಾ.ಪ್ರಭು, ಡಾ.ಚಂದ್ರಮೋಹನ್, ಡಾ.ಕೆಂಚಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

## ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ಕುಕ್ಕುವಾಡ, ಹದಡಿ, ಬಲ್ಲೂರು, ಕನಗೊಂಡನಳ್ಳಿ, ಲೋಕಿಕೆರೆ, ಶ್ಯಾಗಲೆ, ಮತ್ತಿ, ಹೂವಿನಮಡು, ಕಲ್ಕೆರೆ, ಕಲ್‌ಬಂಡೆ, ಕಂದಗಲ್, ಹಾಗೂ ಮೆ॥ ದಾವಣಗೆರೆ ಶುಗರ್ಸ್, ಕುಕ್ಕವಾಡ ಹಾಗೂ ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು, ಹಿರೆಕೋಗಲೂರು, ಕೆರೆಬಿಳಚಿ, ಬಸವಾಪಟ್ಟಣ, ಪುಣ್ಯಸ್ಥಳ, ಚಿರಡೋಣಿ, ನಿಲೋಗಲ್, ಸೋಮಲಾಪುರ, ಚನ್ನಾಪುರ, ಸಿದ್ಧನಮಠ, ಆಕಲಿಕಟ್ಟೆ, ತಣಿಗೆರೆ, ಕತ್ತಲಗೆರೆ, ಕಾರಿಗನೂರು, ಬೆಳಲಗೆರೆ ಹಾಗೂ ನವಿಲೇಹಾಳು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ತುರ್ತು ಕಾಮಗಾರಿ ನಿಮಿತ್ತ ಇಂದು ಬೆಳಿಗ್ಗೆ 9 ರಿಂದ ಸಂಜೆ 7 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

## ಶೀಘ್ರ ತೀರ್ಮಾನ


(1ನೇ ಪುಟದಿಂದ) ನಡೆದಿವೆ. ಬಹುತೇಕ ಇಲಾಖೆಗಳ ಪೂರ್ವಭಾವಿ ಸಭೆ ಮುಗಿದಿದ್ದು, ಆರ್ಥಿಕ ತಜ್ಞರು ಮತ್ತು ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿ, ಅಭಿವೃದ್ಧಿ ಬಜೆಟ್ಟನ್ನು ಮಂಡನೆ ಮಾಡಲು ಕಸರತ್ತು ನಡೆಸಿದ್ದೇನೆ ಎಂದರು. ಹಣಕಾಸು ಇಲಾಖೆ ಅಧಿಕಾರಿಗಳ ಜತೆ ಇಂದು ಚರ್ಚೆ ಮಾಡಿದ್ದೇನೆ. ಯಾವ ಇಲಾಖೆಗೆ ಏನು ಕೊಡಬೇಕು, ಎಷ್ಟೆಷ್ಟು ಖರ್ಚಾಗಿದೆ ಎಂಬುದರ ಬಗ್ಗೆಯೂ ಚರ್ಚೆ ನಡೆದಿದೆ. ಬಜೆಟ್ ಸಿದ್ಧತೆ ಕೂಡಾ ಒಂದು ರೂಪಕ್ಕೆ ಬರುತ್ತಿದೆ ಎಂದರು.


## ಮಂಜುನಾಥ್ ಎಸ್. ನಿಧನ



ದಾವಣಗೆರೆ ಎಂ.ಸಿ.ಸಿ.'ಬಿ' ಬ್ಲಾಕ್, 9ನೇ ಮೇನ್
3ನೇ ಕ್ರಾಸ್, ಮನೆ.ನಂ.3100/1ಎ ವಾಸಿ
**ಮಂಜುನಾಥ್ ಎಸ್.** (56)
ಅವರು ದಿನಾಂಕ : 19-2-2021ರ ಶುಕ್ರವಾರ ಮಧ್ಯಾಹ್ನ 2.45ರ ಸುಮಾರಿಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20-2-2021ರ ಶನಿವಾರ ಬೆಳಿಗ್ಗೆ 11.30ಕ್ಕೆ ಶಾಮನೂರಿನ ರುದ್ರಭೂಮಿಯಲ್ಲಿ (ಗ್ಲಾಸ್ ಹೌಸ್ ಹತ್ತಿರ) ನೆರವೇರಲಿದೆ.
ದು:ಖತಪ್ತ ಕುಟುಂಬ ವರ್ಗ: **ಮೊ: 8660158532**

## ಹೆಚ್.ಜಿ. ಮಹೇಶ್ವರಪ್ಪ ನಿಧನ



ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮದ ವಾಸಿ ಉಳುಪಿನಕಟ್ಟೆ
**ಗೌಡ್ರು ಹೆಚ್.ಜಿ. ಮಹೇಶ್ವರಪ್ಪ** (55)
ಅವರು, ದಿನಾಂಕ 19.02.2021 ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.2.2021 ರಂದು ಶನಿವಾರ ಮಧ್ಯಾಹ್ನ 12 ಗಂಟೆಗೆ ಉಳುಪಿನಕಟ್ಟೆ ಗ್ರಾಮದ ಅವರ ತೋಟದಲ್ಲಿ ನೆರವೇರಲಿದೆ.
ದುಃಖತಪ್ತ ಕುಟುಂಬ ವರ್ಗ
**ಪತ್ನಿ : ಸಾವಿತ್ರಮ್ಮ ಮತ್ತು ಮಕ್ಕಳು, 93410 00646**

॥ ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ॥


## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾ॥ ಶ್ಯಾಬನೂರು ಗ್ರಾಮದ
ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್ ವಾಸಿಗಳಾದ
**ದಿ॥ ಶ್ರೀ ಸಣ್ಣಗೌಡ್ರ ಮುದೇಗೌಡಪ್ಪನವರ**
ಧರ್ಮಪತ್ನಿ
**ಶ್ರೀಮತಿ ಪಾರ್ವತಮ್ಮನವರು**
ಮಾಡುವ ವಿಜ್ಞಾಪನೆಗಳು.
ದಿನಾಂಕ : 13.02.2021ನೇ ಶನಿವಾರ
ಬೆಳಿಗ್ಗೆ 7.00 ಗಂಟೆಗೆ ನನ್ನ ಮಗನಾದ
**ಶ್ರೀ ಸಣ್ಣಗೌಡ್ರ ಭೀಮಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ 21.02.2021ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ
ಶ್ಯಾಬನೂರು ಗ್ರಾಮದ
ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಪಾರ್ವತಮ್ಮನವರು ಹಾಗೂ ಮೃತರ ಧರ್ಮಪತ್ನಿ ಶ್ರೀಮತಿ ಪುಷ್ಪ ಸಣ್ಣಗೌಡ್ರ ಭೀಮಪ್ಪ ಶ್ರೀಮತಿ ಸ್ಮಿತಾ, ಶ್ರೀ ಹೆಚ್.ಎಸ್. ಕಿರಣ್ ಹಾಗೂ ಚಿ॥ ಶಮಂತ್ ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಶ್ಯಾಬನೂರು ಗೌಡ್ರ ವಂಶಸ್ಥರು ಮತ್ತು ಬಂಧು-ಮಿತ್ರರು. ಫೋ. : 98442 21305
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


॥ ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು ॥ ॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಭಗತ್‌ಸಿಂಗ್ ನಗರ ವಾಸಿ
**ಶ್ರೀಮತಿ ಎಸ್.ಎಂ. ಪಾರ್ವತಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 17-02-2021ನೇ ಬುಧವಾರ ಮಧ್ಯಾಹ್ನ 1-45ಕ್ಕೆ
ನನ್ನ ಪೂಜ್ಯ ಪತಿಯವರಾದ
**ಶ್ರೀ ಎಸ್.ಎಂ. ಮಹಾಸ್ವಾಮಿಯವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 21-02-2021ನೇ ಭಾನುವಾರ ಬೆಳಿಗ್ಗೆ 10-30 ರಿಂದ ಮೃತರ ಸ್ವಗೃಹ # 389, ಭಗತ್‌ಸಿಂಗ್ ನಗರ, ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಹಿಂಭಾಗ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖತಪ್ತರು,
ಶ್ರೀಮತಿ ಎಸ್.ಎಂ. ಪಾರ್ವತಮ್ಮ ಮತ್ತು ಮಕ್ಕಳು,
ಅಳಿಯಂದಿರು ಹಾಗೂ ಬಂಧು-ಮಿತ್ರರು. ಮೊ. : 98444 22522
ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


## ಬಿ.ಎಂ. ರಜನಿಕಾಂತ ನಿಧನ



ಹರಪನಹಳ್ಳಿ ತಾಲ್ಲೂಕು ಸತ್ತೂರು ಗ್ರಾಮದ ವಾಸಿ
**ಬಿ.ಎಂ. ರಜನಿಕಾಂತ** (41)
ಅವರು, ದಿನಾಂಕ 19.02.2021 ರಂದು ಶುಕ್ರವಾರ ಮಧ್ಯಾಹ್ನ 3.03ಕ್ಕೆ ನಿಧನರಾಗಿದ್ದಾರೆ. ತಂದೆ-ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಸಹೋದರ, ಸಹೋದರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯ ದಿನಾಂಕ 20.02.2021ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಸತ್ತೂರು ಗ್ರಾಮದಲ್ಲಿ ನೆರವೇರಲಿದೆ.
**ಇಂತಿ ದುಃಖತಪ್ತ ಕುಟುಂಬ ವರ್ಗ : 99003 40096**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

## ಸವಿನೆನಪು



**ದಿ॥ ಶ್ರೀ ಜಿ. ಬಸಪ್ಪ**
ಮಾಲೀಕರು : ಜಿ. ಬಸಪ್ಪ ಅಂಡ್ ಸನ್, ಪಾತ್ರೆ ವ್ಯಾಪಾರಿಗಳು,
ದೊಡ್ಡಪೇಟೆ ದಾವಣಗೆರೆ. ಮೊ: 94485 16866
ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಮುನ್ನಡೆದು ನಿಮ್ಮ ಆತ್ಮಕ್ಕೆ ಚಿರಶಾಂತಿ ಬಯಸುವ,
ಪತ್ನಿ : ಶ್ರೀಮತಿ ಪ್ರೇಮಮ್ಮ ಜಿ. ಬಸಪ್ಪ
ಬಿ. ನೇತ್ರಾವತಿ, ಮೊಮ್ಮಗ: ಶಶಾಂಕ್,
ಬಿ. ಲಿಂಗರಾಜ್ ರೇಖಾ ಮತ್ತು ಮೊಮ್ಮಗ : ಝೇಂಕಾರ್
ಬಿ. ವೇದಾವತಿ ರುದ್ರಮುನಿ ಮತ್ತು ಮೊಮ್ಮಗಳು : ಯಶ್ಮಿತಾ

## ಜಿಗಳಿಯಲ್ಲಿ ಛತ್ರಪತಿ ಶಿವಾಜಿ ಜಯಂತಿ



ಮಲೇಬೆನ್ನೂರು, ಫೆ.19 - ಜಿಗಳಿ ಗ್ರಾ.ಪಂ ಕಛೇರಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಅವರ ಜಯಂತಿಯನ್ನು ಆಚರಿಸಲಾಯಿತು. ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ಕರಿಯಮ್ಮ, ಗ್ರಾ.ಪಂ ಸದಸ್ಯರಾದ ಡಿ.ಎಂ ಹರೀಶ್, ಕೆ.ಜಿ. ಬಸವರಾಜ್, ಗ್ರಾ.ಪಂ ಮಾಜಿ ಸದಸ್ಯೆ ಶ್ರೀಮತಿ ಸೌಮ್ಯ ಮಂಜುನಾಥ್, ಪಿಡಿಓ ದಾಸರ ರವಿ, ಬಿಲ್ ಕಲೆಕ್ಟರ್ ಬಿ.ಮಹೇಶ್, ಶಿಕ್ಷಕ ಅಣ್ಣಪ್ಪ, ಡಿ. ವಿಜಯ ಭಾಸ್ಕರ್, ಸತೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹರಿಹರ ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹರಿಹರದ ಹಳ್ಳದಕೇರಿ, ಬಂಬೂ ಬಜಾರ್, ಹರಿಹರೇಶ್ವರ ಬಡಾವಣೆ, ಕೋಟೆ ರಸ್ತೆ, ಅಯ್ಯಪ್ಪ ಕಾಲೋನಿ, ತುಂಗಭದ್ರಾ ಕಾಲೋನಿ, ಗಂಗನಗರ, ಕಾಳಿದಾಸನಗರ, ಕೈಲಾಸನಗರ, ಬೆಂಕಿನಗರ, ಜೆ.ಸಿ. ಬಡಾವಣೆ, ಪ್ರಶಾಂತನಗರ, ವಿದ್ಯಾನಗರ 'ಎ', 'ಬಿ' ಮತ್ತು 'ಸಿ' ಬ್ಲಾಕ್, ಸುತ್ತಮುತ್ತ, ಇಂದಿರಾನಗರ, ಬಾಹರ್‌ಮಕಾನ್, ಶೋಭಾ ಟಾಕೀಸ್ ರೋಡ್, ಪೋಸ್ಟ್ ಆಫೀಸ್ ರಸ್ತೆ, ಚರ್ಚ್ ರಸ್ತೆ, ಚಿನ್ನಪ್ಪ ಕಾಂಪೌಂಡ್, ಹಳೇ ಶಿವಮೊಗ್ಗ, ವಿದ್ಯಾನಗರ, ಕೆಐಎಡಿಬಿ 22 ಕೆರೆ ಹಲಸಬಾಳು, ಹೆಚ್‌ಟಿ ಸ್ಥಾವರ ಹಾಗೂ ಹರಿಹರ-ಹೊಸಪೇಟೆಯಿಂದ ರಾಜನಹಳ್ಳಿ ಕುಡಿಯುವ ನೀರಿನ ಸ್ಥಾವರ, ಹಲಸಬಾಳು, ಹರಗನಹಳ್ಳಿ, ಬಿಳಸನೂರು, ಕೆಐಎಡಿಬಿ, ಹನಗವಾಡಿ, ಕೈಗಾರಿಕಾ ಕೇಂದ್ರ ಮತ್ತು ಬನ್ನಿಕೋಡು, ಹನಗವಾಡಿ ಮತ್ತು ಶೇರಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ.

## ರಾಣೇಬೆನ್ನೂರಿನಲ್ಲಿ ನೇತ್ರ ತಪಾಸಣೆ ಶಿಬಿರ

ರಾಣೇಬೆನ್ನೂರು, ಫೆ.19- ಇಲ್ಲಿನ ಶಿಕ್ಷಕರ ಸಹಕಾರಿ ಸಂಘದ ಸಭಾಭವದಲ್ಲಿ ನಾಡಿದ್ದು ದಿನಾಂಕ 21 ರ ಭಾನುವಾರದಂದು ಸರ್ಕಾರಿ ಶಾಲಾ ಶಿಕ್ಷಕ-ಶಿಕ್ಷಕಿಯರಿಗೆ ಉಚಿತ ನೇತ್ರ ಪರೀಕ್ಷಾ ಶಿಬಿರವನ್ನು ಹಮ್ಮಿಕೊಂಡಿದ್ದು, ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ ತಿಳಿಸಿದೆ.

# ಜಾನಪದ ಅಕಾಡೆಮಿಯಲ್ಲಿ 108 ಕಲೆ ಕಲಿಯುವ ಅವಕಾಶ



### ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ

ದಾವಣಗೆರೆ, ಫೆ.19- ಜಾನಪದ ಅಕಾಡೆಮಿ ವತಿಯಿಂದ ಜನಪದ ಕಲೆಗಳನ್ನು ಕಲಿಸುವ ಅವಕಾಶ ಕಲ್ಪಿಸಲಿದ್ದು, ನಿಮ್ಮ ಆಸಕ್ತಿಗನುಗುಣವಾದ ಕಲೆಯನ್ನು ಆಯ್ದುಕೊಂಡು ಕಲಿಕಾಸಕ್ತಿ ತೋರಿದರೆ ಶಿಷ್ಯ ವೇತನ ಸಹಿತ ಕಲಿಸುವುದಾಗಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಬಿ. ಮಂಜಮ್ಮ ಜೋಗತಿ ಸಮುದಾಯದವರಿಗೆ ತಿಳಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ ಅಭಯ ಸ್ಪಂದನ ಸಂಘಟನೆ ವತಿಯಿಂದ (ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆ) ಇಂದು ಹಮ್ಮಿಕೊಂಡಿದ್ದ ಸಮುದಾಯ ಸಂಘಟನೆಯ ಕಾರ್ಯಕ್ರಮ ಮತ್ತು ಸಮುದಾಯದ ಸಾಧಕಿಯರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ, ಅವರು ಮಾತನಾಡಿದರು.

ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ ಸಹಿತ 180 ಜನಪದ ಕಲೆಗಳನ್ನು ಕಲಿಸುವ ಅವಕಾಶವನ್ನು ಜಾನಪದ ಅಕಾಡೆಮಿ ಕಲ್ಪಿಸಲಿದೆ. ಆ ಕಲೆಗಳನ್ನು ಕಲಿತು ಉನ್ನತವಾಗಿ ಬೆಳೆದು ಪದ್ಮಶ್ರೀ ಪ್ರಶಸ್ತಿಗೆ ನೀವೂ ಭಾಜನರಾಗಬೇಕು ಎಂದು ಆಶಿಸಿದರಲ್ಲದೇ, ಒಂದು ಜಿಲ್ಲೆಯ ಕಲೆಯನ್ನು ಮತ್ತೊಂದು ಜಿಲ್ಲೆಯವರು ಕಲಿಯಬೇಕು. ಅದಕ್ಕೆ ಬೇಕಾದ ಎಲ್ಲಾ ಪ್ರೋತ್ಸಾಹವನ್ನು ಅಕಾಡೆಮಿಯಿಂದ ನೀಡಲಾಗುವುದು ಎಂದು ಹೇಳಿದರು.

ಹಣ ಮಾಡುವುದು ದೊಡ್ಡದಲ್ಲ. ಕಳ್ಳತನ ಮಾಡಿಯೂ ಹಣ ಸಂಪಾದಿಸಬಹುದು. ಆದರೆ ಉತ್ತಮ ಹೆಸರು ಪಡೆಯುವುದು ಸುಲಭದ ಮಾತಲ್ಲ. ಕೋಟಿ ಕೊಟ್ಟರೂ ಸುಮ್ಮನೇ ಹೆಸರು ಪಡೆಯಲಾಗುವುದಿಲ್ಲ. ಆದ್ದರಿಂದ ತುಂಬಾ ಆಸೆಗಳನ್ನು ಇಟ್ಟುಕೊಂಡು ಹಣವನ್ನು ಬೆನ್ನತ್ತದೇ, ಅವಶ್ಯಕತೆಗಷ್ಟೇ ಹಣ ಸಂಪಾದನೆ ಮಾಡಬೇಕು. ಮುಖ್ಯವಾಗಿ ಉತ್ತಮ ಹೆಸರು ಸಂಪಾದಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಆನೇಕಲ್ ತಾಲ್ಲೂಕು ದೊಂಸಂದು ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿರುವ ಆರತಿ ಜವರೇಗೌಡ ಮಾತನಾಡಿ, ಭಿಕ್ಷಾಟನೆಯನ್ನು ಯಾರೂ ಇಷ್ಟಪಟ್ಟು ಮಾಡುವುದಿಲ್ಲ. ಆದರೆ, ಅದರಿಂದ ನಾವುಗಳು ಹೊರಗೆ ಬರಬೇಕು. ನಮಗೆ ಹೀನಾಮಾನವಾಗಿ ನಿಂದಿಸಿ ನೀರು, ಊಟ, ಬಾಡಿಗೆ ಮನೆ ನೀಡಬಾರದು ಎಂದು ಹೇಳಿದ್ದ ಊರಿನಲ್ಲಿಯೇ ಗ್ರಾಮ ಪಂಚಾಯಿತಿ ಚುನಾವಣೆಗೆ ನಿಂತು ಅಧಿಕ ಮತಗಳನ್ನು ಪಡೆದು ಗೆದ್ದಿದ್ದೇನೆ. ಇದಕ್ಕೆ ನಾನು ಜನರ ಕಷ್ಟಕ್ಕೆ ಸ್ಪಂದಿಸಿದ್ದೇ ಕಾರಣ. ನೀವು ಸಹ ವ್ಯವಹಾರ ಮತ್ತು ರಾಜಕೀಯ ಕ್ಷೇತ್ರಕ್ಕೆ ಬರಬೇಕು. ಜನರ ಸಂಕಷ್ಟಗಳಿಗೆ ಸ್ಪಂದಿಸಿದಾಗ ಅವರೇ ನಮ್ಮ ಜೀವನದ ಸಾಧನೆಗೆ ದಾರಿ ದೀಪವಾಗುವರು ಎಂದರು.

ಪಾಲಿಕೆಯ ನಾಮನಿರ್ದೇಶಿತ ಸದಸ್ಯರಾದ ಹೆಚ್.ಸಿ. ಜಯಮ್ಮ ಮಾತನಾಡಿ, ದೈವ ಬಲದ ಮುಖೇನ ಸಾಧನೆ ಮಾಡುತ್ತಿರುವ ನಿಮ್ಮ ಶ್ರಮ ಬಹಳಷ್ಟಿದೆ. ನೀವು ಕೂಡ ಐಎಎಸ್, ಐಪಿಎಸ್ ಸೇರಿದಂತೆ ಸರ್ಕಾರಿ ಉನ್ನತ ಹುದ್ದೆಯಲ್ಲೂ ಛಾಪು ಮೂಡಿಸುವ ಶಕ್ತಿ ನಿಮ್ಮಲ್ಲಿದೆ. ಹಾಗಾಗಿ ಯಾರನ್ನೂ ನಿರೀಕ್ಷಿಸದೇ ಸ್ವಂತಿಕೆಯಿಂದ ನಿಮ್ಮನ್ನು ನೀವು ಗುರುತಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಆಶಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಕುವೆಂಪು ಕನ್ನಡ ಭವನದಲ್ಲಿ ನಿಮ್ಮ ಸಮುದಾಯದ ಸಮಾವೇಶ, ನಿಮ್ಮ ಸಂಕಷ್ಟಗಳ ಕುರಿತ ವಿಚಾರ ಸಂಕಿರಣವನ್ನು ಮಾಡಬೇಕು. ಸಾಹಿತ್ಯ ಪರಿಷತ್ತು ನಿಮ್ಮ ಏಳಿಗೆಗೆ ಸಹಕಾರ ನೀಡಲಿದೆ ಎಂದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್‌ನ ಜಬೀನಾ ಖಾನಂ ಮಾತನಾಡಿದರು. ಅಭಯ ಸ್ಪಂದನ ಕಾರ್ಯದರ್ಶಿ ಎಸ್. ಚೈತ್ರಾ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇದೇ ವೇಳೆ ಅಭಯ ಸ್ಪಂದನ ಸಂಘಟನೆಯಿಂದ ಆರತಿ ಜವರೇಗೌಡ ಹಾಗೂ ಬಿ. ಮಂಜಮ್ಮ ಜೋಗತಿ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಬಿ. ಮಂಜಮ್ಮ ಜೋಗತಿ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮಂಜುನಾಥ ಕುಂದವಾಡ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ. ಕೆ. ಹೆಚ್. ಗಂಗಾಧರ್, ಅಭಯ ಸ್ಪಂದನ ಅಧ್ಯಕ್ಷೆ ಉಮಾ, ಮಹಿಳಾ ಮುನ್ನಡೆಯ ಪವಿತ್ರಾ, ದುರ್ಗಾಶಕ್ತಿ ಏಡ್ಸ್ ತಡೆಗಟ್ಟುವ ಮಹಿಳಾ ಸಂಘದ ಅಧ್ಯಕ್ಷೆ ಎಸ್.ಟಿ. ಮಂಜುಳಾ, ಅಂಗವಿಕಲರ ಆರ್‌ಪಿಓ ಟಾಸ್ಕ್ ರಾಜ್ಯ ಉಪಾಧ್ಯಕ್ಷೆ ಎಂ. ವಿಜಯಲಕ್ಷ್ಮಿ ಸೇರಿದಂತೆ ಇತರರು ಇದ್ದರು.

ಕೆ.ಜಿ. ಮಂಜುನಾಥ ಸ್ವಾಗತಿಸಿದರು. ವಿ.ಎಚ್. ಗೀತಾ ವಂದಿಸಿದರು. ಹುಚ್ಚಂಗಿ ಸಿ. ಪ್ರಸಾದ್ ನಿರೂಪಿಸಿದರು.

# ಶೈಕ್ಷಣಿಕ ಕ್ಷೇತ್ರದ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ನೀತಿ ಪೂರಕ

## ದಾವಿವಿಯ ರಾಷ್ಟ್ರೀಯ ಶಿಕ್ಷಣ ನೀತಿ ಕಾರ್ಯಾಗಾರದಲ್ಲಿ ಶಿಕ್ಷಣ ತಜ್ಞ ಡಾ. ರಾಜೇಂದ್ರಕುಮಾರ ಜೋಶಿ



ದಾವಣಗೆರೆ, ಫೆ.19- ಕೌಶಲ್ಯ ಆಧಾರಿತ ವೃತ್ತಿಪರವಾದ ಮತ್ತು ಮಕ್ಕಳಿಗೆ ಜೀವನ ಮೌಲ್ಯಗಳನ್ನು ಕಲಿಸುವ ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ನೂತನ ಶಿಕ್ಷಣ ನೀತಿಯು ದೇಶದ ಶೈಕ್ಷಣಿಕ ಕ್ಷೇತ್ರದ ಉಜ್ವಲ ಭವಿಷ್ಯಕ್ಕೆ ಪೂರಕವಾಗಿದೆ ಎಂದು ರಾಜಕೋಟದ ಮಾರ್ವಾಡಿ ವಿಶ್ವವಿದ್ಯಾನಿಲಯದ ಮಾಜಿ ನಿರ್ದೇಶಕ ಮತ್ತು ಶಿಕ್ಷಣ ತಜ್ಞ ಡಾ. ರಾಜೇಂದ್ರಕುಮಾರ ಜೋಶಿ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಐಕ್ಯೂಎಸಿ ವತಿಯಿಂದ ಗುರುವಾರ ಏರ್ಪಡಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ-2020 ಭವಿಷ್ಯದ ದಾರಿ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ವೃತ್ತಿ- ಬದುಕು ಮತ್ತು ಭವಿಷ್ಯ ಒಂದಕ್ಕೊಂದು ಬೆಸೆದುಕೊಂಡಿವೆ. ಹೊಸ ಶಿಕ್ಷಣ ನೀತಿಯು ಮಕ್ಕಳನ್ನು ಪರ್ಯಾಯ ಯೋಚನೆಗೆ ಒಳಪಡಿಸುವ ನಿಟ್ಟಿನಲ್ಲಿ ರೂಪುಗೊಂಡಿದೆ ಎಂದು ನುಡಿದರು.

ಕಲಿಕೆಯು ನಾಲ್ಕು ಗೋಡೆಯ ಮಧ್ಯದ ಪಠ್ಯದ ಶಿಕ್ಷಣ ಆಗಬಾರದು. ಅದು ಪ್ರತಿ ವಿದ್ಯಾರ್ಥಿಯ ಆಸಕ್ತಿ, ಅಭಿರುಚಿ ಅಥವಾ ಪರಂಪರಾಗತ ಕಲೆಯೂ ಆಗಿರಬಹುದು. ಯಾವುದೇ ಕ್ಷೇತ್ರವನ್ನು ಆಯ್ದುಕೊಂಡರೂ ಅದರಲ್ಲಿ ಪರಿಣಿತಿ ಪಡೆದು ಬದುಕನ್ನು ಕಟ್ಟಿಕೊಳ್ಳುವಂತಾಗಬೇಕು. ಆಗಲೇ ಶಿಕ್ಷಣಕ್ಕೆ ಮನ್ನಣೆ ಸಿಗುವುದು ಹಾಗೂ ಶಿಕ್ಷಣದ ಉದ್ದೇಶವೂ ಈಡೇರುವುದು ಎಂದು ತಿಳಿಸಿದರು.

ಸದ್ಯದ ಶಿಕ್ಷಣ ಪದ್ಧತಿಯು ಪದವಿಯನ್ನು ನೀಡುವುದಕ್ಕೆ ಆದ್ಯತೆ ನೀಡಿದೆ. ಇದರಿಂದ ಅಂಕಗಳಿಗೆ ಆದ್ಯತೆ ಸಿಕ್ಕರೆ ಹೊಸ ಶಿಕ್ಷಣ ನೀತಿ ಮಾನವೀಯ ಸಂಬಂಧವನ್ನು ಬೆಸೆಯುವ ಪದ್ಧತಿಯಾಗಿದೆ. ಇಲ್ಲಿ ಕಲಿಕೆಯ ಜೊತೆಗೆ ವೃತ್ತಿ ಶಿಕ್ಷಣ ಹಾಗೂ ಅದಕ್ಕೆ ಅಗತ್ಯವಿರುವ ಕೌಶಲ್ಯವನ್ನೂ ಕಲಿಯಲು ಅವಕಾಶವಿದೆ. ಯಾವುದೇ ವ್ಯಕ್ತಿ ತನಗೆ ಇಷ್ಟವಾದ ನಿಕಾಯದಲ್ಲಿ ಅಧ್ಯಯನ ಮಾಡಿ ಅದರಲ್ಲಿ ಪ್ರಭುತ್ವ ಸಾಧಿಸಲು ಒತ್ತು ನೀಡಲಾಗಿದೆ. ಇದರಿಂದ ವ್ಯಕ್ತಿಯ ಜೊತೆಗೆ ಜೀವನಕ್ಕೆ ದಾರಿ ಮಾಡಿಕೊಡುವ ಕೌಶಲ್ಯಕ್ಕೂ ಆದ್ಯತೆ ಸಿಗಲಿದೆ ಎಂದು ನುಡಿದರು.

ದೇಶದಾದ್ಯಂತ ಒಂದೇ ಮಾದರಿಯ ಶಿಕ್ಷಣ ಪದ್ಧತಿ ಹಾಗೂ ಕಲಿಕಾ ವಿನ್ಯಾಸವು ಜಾರಿಗೆ ಬರಲಿದೆ. ವಿದ್ಯಾರ್ಥಿಗಳಿಗೆ ಕಲಿಸುವ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಹೆಚ್ಚು ಮಹತ್ವ ಪಡೆಯಲಿದೆ. ಕಲಿಕೆಯಷ್ಟೇ ಕಲಿಸುವ ಕೌಶಲ್ಯವನ್ನು ಶಿಕ್ಷಕರು ಅಳವಡಿಸಿಕೊಳ್ಳಬೇಕು. ಮಕ್ಕಳ ಆಸಕ್ತಿಯನ್ನು ಗುರುತಿಸಿ ಅವರಿಗೆ ಮಾರ್ಗದರ್ಶನ ನೀಡುವ ಪದ್ಧತಿಯನ್ನೂ ರೂಢಿಸಿಕೊಳ್ಳುವುದು ಅನಿವಾರ್ಯವಾಗಲಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಮಾತನಾಡಿ, ಮಕ್ಕಳಿಗೆ ಪಾಠ ಕಲಿಸುವ ಜೊತೆಗೆ ಸ್ವತಃ ಆತ್ಮಾವಲೋಕನ ಮಾಡಿಕೊಳ್ಳಬೇಕಾದುದು ಪ್ರತಿಯೊಬ್ಬ ಶಿಕ್ಷಕನ ಜವಾಬ್ದಾರಿ. ಅಧ್ಯಯನ, ಅಧ್ಯಾಪನ, ಸಂಶೋಧನೆಗಳ ಜೊತೆಗೆ ಸಮುದಾಯ ಸೇವೆಯೂ ಪ್ರತಿಯೊಬ್ಬ ಶಿಕ್ಷಕನ ಆದ್ಯತೆ ಆಗಬೇಕು. ಮಕ್ಕಳಿಗೆ ತಿಳಿಯುವಂತೆ ಪಾಠ ಕಲಿಸುವ ಕೌಶಲ್ಯವನ್ನು ಅರಿಯಬೇಕು ಎಂದು ನುಡಿದರು.

ವ್ಯಕ್ತಿಯ ಪದವಿಗಿಂತ ಅವನಲ್ಲಿರುವ ಕೌಶಲ್ಯಗಳಿಗೆ ಹೆಚ್ಚು ಮನ್ನಣೆ ನೀಡುವ ಹೊಸ ಶಿಕ್ಷಣ ನೀತಿಯನ್ನು ಸರ್ಕಾರದ ಆದೇಶದಂತೆ ಅಳವಡಿಸಲು ದಾವಣಗೆರೆ ವಿಶ್ವವಿದ್ಯಾನಿಲಯ ಬದ್ಧವಾಗಿದೆ. ಮಕ್ಕಳ ಭವಿಷ್ಯಕ್ಕೆ ಹೊಸ ದಾರಿ ತೋರುವ, ದೇಶದ ಉನ್ನತಿಗೆ ಶಿಕ್ಷಣವು ಯಾವುದೇ ಮೂಲದಿಂದ ಬಂದರೂ ಅಳವಡಿಸಿಕೊ ಳ್ಳಲು ಸಿದ್ಧವಾಗಿದೆ ಎಂದು ಭರವಸೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾದ ಶಿಕ್ಷಣ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರದ ಉಪ ನಿರ್ದೇಶಕರಾದ ಡಾ. ಬಿ.ಎಸ್. ಪದ್ಮಾವತಿ, ಗೌರೀಶ ಜೋಶಿ ಹೊಸ ಶಿಕ್ಷಣ ನೀತಿಯ ಮಹತ್ವ ಮತ್ತು ಅದರ ಅನುಷ್ಠಾನದಿಂದ ಆಗುವ ಉಪಯೋಗಗಳ ಕುರಿತು ಮಾತನಾಡಿದರು.

ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರೀಕ್ಷಾಂಗ ಕುಲಸಚಿವೆ ಪ್ರೊ. ಎಚ್.ಎಸ್. ಅನಿತಾ, ಹಣಕಾಸು ಅಧಿಕಾರಿ ಪ್ರಿಯಾಂಕಾ ಡಿ, ಸಿಂಡಿಕೇಟ್ ಸದಸ್ಯರಾದ ವಿಜಯಲಕ್ಷ್ಮಿ ಹಿರೇಮಠ, ಡಾ. ಶ್ರೀಧರ್ ಎಸ್ ಉಪಸ್ಥಿತರಿದ್ದರು. ಐಕ್ಯೂಎಸಿ ಸಂಯೋಜನಾಧಿಕಾರಿ ಡಾ. ಎಚ್. ಪಿ. ನಾಗಭೂಷಣ್ ಸ್ವಾಗತಿಸಿದರು. ಡಾ.ಟಿ. ಎಲ್.ಪ್ರವೀಣ್ ವಂದಿಸಿದರು. ಸೌಮ್ಯ ಬುಳ್ಳಾ ಕಾರ್ಯಕ್ರಮ ನಿರೂಪಿಸಿದರು.

# ಹೊಸ ಹೊಸ ಸವಾಲುಗಳನ್ನು ಸ್ವೀಕರಿಸಲು ತಯಾರಾಗಬೇಕು

## ಎ.ಆರ್.ಜಿ. ಕಾಲೇಜಿನಲ್ಲಿ 'ಪುನಶ್ಚೇತನ ಹಾಗೂ ಪ್ರೇರಣೆ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸುಧೀಂದ್ರ ರಾವ್ ಕಿವಿಮಾತು



ದಾವಣಗೆರೆ, ಫೆ.19- ಎ.ಆರ್.ಜಿ. ಕಾಲೇಜಿನ ಹಳೆ ವಿದ್ಯಾರ್ಥಿಗಳ ಹಾಗೂ ಹೊಸ ವಿದ್ಯಾರ್ಥಿಗಳ ಸಮಾಗಮ ಕಾರ್ಯಕ್ರಮವು ಕಾಲೇಜಿನ ಸಭಾಂಗಣದಲ್ಲಿ ನಡೆಯಿತು. 1975-78 ನೇ ಸಾಲಿನ ವಿದ್ಯಾರ್ಥಿಗಳಾದ ಡಾ. ಶೇಖರ್ ಎಸ್. ಅಯ್ಯರ್ ಮತ್ತು ಪಿ.ಎಸ್. ಸುಧೀಂದ್ರ ರಾವ್ ಅವರು 2020-21ನೇ ಸಾಲಿನ 'ಪುನಶ್ಚೇತನ ಹಾಗೂ ಪ್ರೇರಣೆ' ಎಂಬ ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳ ಸಬಲೀಕರಣಕ್ಕಾಗಿ ಮಾತನಾಡಿದರು.

ಡಾ. ಶೇಖರ್ ಎಸ್. ಅಯ್ಯರ್, ತಮ್ಮ ವಿದ್ಯಾರ್ಥಿ ಜೀವನದ ಹಳೆಯ ದಿನಗಳನ್ನು ನೆನಪಿಸಿಕೊಳ್ಳುತ್ತಾ 'ಮೀಟಿಂಗ್ ಕಾರ್ಪೊರೇಟ್ ಎಕ್ಸ್‌ಪೆಕ್ಟೇಷನ್' ಎಂಬ ವಿಷಯ ಕುರಿತು ಮಾತನಾಡುತ್ತಾ,

ಇಂದಿನ ವಿದ್ಯಾರ್ಥಿಗಳು ಜಾಗತಿಕ ಸ್ಪರ್ಧಾತ್ಮಕ ಸವಾಲುಗಳನ್ನು ಎದುರಿಸಿ ಉದ್ಯೋಗ ಮಾರುಕಟ್ಟೆಯಲ್ಲಿ ನಿರೀಕ್ಷಿತ ಉದ್ಯೋಗಗಳನ್ನು ಪಡೆಯಲು ಬೇಕಾದ ನೈಪುಣ್ಯತೆ, ಸಮಯ ಪ್ರಜ್ಞೆ, ಶಿಸ್ತು, ವಿಷಯಾಧಾರಿತ ಜ್ಞಾನದ ಜೊತೆಗೆ ಸಂವಹನ ಕೌಶಲ್ಯಗಳು, ಜೀವನ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಂಡು, ಉದ್ಯೋಗ ಆಯ್ಕೆಗೆ ಬೇಕಾಗಿರುವ ಮಾನದಂಡಗಳನ್ನು ರೂಡಿಸಿಕೊಳ್ಳಬೇಕೆಂದು ಕರೆಕೊಟ್ಟರು ಹಾಗೂ ಮಾನಸಿಕ ಸಾಮರ್ಥ್ಯ, ತಂತ್ರಜ್ಞಾನದ ಅವಶ್ಯಕತೆ, ಸಂಯಮ ಮತ್ತು ಜ್ಞಾನ ವೃದ್ಧಿಯ ಮಹತ್ವವನ್ನು ತಿಳಿಸಿ ಹೇಳಿದರಲ್ಲದೆ ವಿದ್ಯಾರ್ಥಿಗಳು ಹೊಸ ಹೊಸ ಪರಿಕಲ್ಪನೆಗಳನ್ನು ರೂಢಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಂಯೋಜಕರಲ್ಲಿ ಮತ್ತೊಬ್ಬರಾದ ಪಿ.ಎಸ್. ಸುಧೀಂದ್ರ ರಾವ್ ವಿದ್ಯಾರ್ಥಿಗಳು ಸದಾ ಹೊಸ ಹೊಸ ಸವಾಲುಗಳನ್ನು ಸ್ವೀಕರಿಸಲು ತಯಾರಾಗಬೇಕೆಂದು ಹೇಳುತ್ತಾ, ವ್ಯಕ್ತಿತ್ವ ಪರೀಕ್ಷೆಗಳಾದ ಸಾಮರ್ಥ್ಯ, ನ್ಯೂನತೆ, ಅವಕಾಶ ಹಾಗೂ ಸವಾಲುಗಳನ್ನು ಅರಿತು ಸ್ವಂತ ಉದ್ದಿಮೆ ಆರಂಭಿಸುವ ಮುಕ್ತ ಆಲೋಚನೆ ರೂಡಿಸಿಕೊಳ್ಳಬೇಕೆಂದರು. ಅವಕಾಶ ಮತ್ತು ಬೆಳವಣಿಗೆಗಳ ಮುನ್ನೋಟ ಬೆಳೆಸಿಕೊಳ್ಳಬೇಕೆಂದರಲ್ಲದೇ ಈಗಾಗಲೇ ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾದ ಮಹನೀ ಯರುಗಳ ಉದಾಹರಣೆ ಕೊಡುತ್ತಾ ವಿದ್ಯಾರ್ಥಿಗಳನ್ನು ವಿವಿಧ ರೀತಿಯಲ್ಲಿ ಆಲೋಚಿಸುವಂತೆ ಪ್ರೇರೇಪಿಸಿದರು.

ಕಾರ್ಯಕ್ರಮವನ್ನು ಮಧುಕುಮಾರ್ ನಿರ್ವಹಿಸಿದರು.

## ವಿಧಾನಪರಿಷತ್ ಸದಸ್ಯ ವೈ.ಎ. ನಾರಾಯಣ ಸ್ವಾಮಿ ಅವರ ಪುತ್ರ ಡಾ॥ ರೋಹಿತ್ ನಾರಾಯಣ್‌ರಿಗೆ ಎಂ.ಬಿ.ಬಿ.ಎಸ್‌ನಲ್ಲಿ 10ನೇ ರ್‍ಯಾಂಕ್







ದಾವಣಗೆರೆ, ಫೆ.19– 2015ರಲ್ಲಿ ಸಿಇಟಿ ಮುಖಾಂತರ 400ನೇ ರ್‍ಯಾಂಕ್‌ನಲ್ಲಿ ಸರ್ಕಾರಿ ಕೋಟಾದಡಿ ಮೆರಿಟ್ ಆಧಾರದ ಮೇಲೆ ವೈದ್ಯಕೀಯ ಸೀಟನ್ನು ದಾವಣಗೆರೆ ನಗರದ ಜೆಜೆಎಂ ಮೆಡಿಕಲ್ ಕಾಲೇಜಿನಲ್ಲಿ ಪಡೆದು, ಉತ್ತಮ ವ್ಯಾಸಂಗ ಮಾಡಿ 10ನೇ ರ್‍ಯಾಂಕ್ ಪಡೆದಿದ್ದಾರೆ. ಕಾಲೇಜಿಗೆ ಹಾಗೂ ಪೋಷಕರಿಗೆ ವಿಶೇಷವಾಗಿ ವೈ.ಎ. ನಾರಾಯಣ ಸ್ವಾಮಿಯವರಿಗೆ ಗೌರವ ತಂದಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸೇವೆ ಮಾಡಬೇಕೆಂಬ ಕನಸು ಇಂದು ನನಸಾಗಿದೆ ಎಂದು ವಿಧಾನಪರಿಷತ್ ಸದಸ್ಯರಾದ ಡಾ॥ ವೈ.ಎ. ನಾರಾಯಣಸ್ವಾಮಿ ಅವರ ಪುತ್ರ 10ನೇ ರ್‍ಯಾಂಕ್ ಪಡೆದ ಡಾ॥ರೋಹಿತ್ ನಾರಾಯಣ್‌ರವರು ತಮ್ಮ ಮನದಾಳದ ಮಾತುಗಳನ್ನು ಹೇಳಿದರು.

ಶುಕ್ರವಾರ ತ್ರಿಶೂಲ್ ಕಲಾಭವನದಲ್ಲಿ ಪದವಿ ಪಡೆದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಹಾಗೂ ಗೋಲ್ಡನ್ ಜ್ಯುಬಿಲಿ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ತಂದೆಯ ಆಸೆಯಂತೆ ನನ್ನ ಅಣ್ಣ ಆದಿತ್ಯನಾರಾಯಣ ಪ್ಯಾರಿಸ್‌ನಲ್ಲಿ ಎಂ.ಎಸ್. ಅಭ್ಯಾಸ ಮಾಡುತ್ತಿದ್ದು, ನಾನು ಕೂಡ ಒಳ್ಳೆಯ ವೈದ್ಯನಾಗಿ ಜನಸಾಮಾನ್ಯರ ಸೇವೆ ಮಾಡಬೇಕೆಂಬ ನನ್ನ ಹಂಬಲ ನನಗಿದೆ.

ನನ್ನ ವಿದ್ಯಾಭ್ಯಾಸ ಕೂಡ ಅಷ್ಟೇ ಶ್ರದ್ಧೆಯಿಂದ ಮಾಡಿದ್ದೇನೆ. ನನ್ನ ಗುರಿ ತಲುಪಬೇಕಾದರೆ ಕಷ್ಟಪಟ್ಟು ಕಾಲೇಜಿನ ಅಧ್ಯಾಪಕ ವೃಂದದವರು ನನ್ನ ತಾಯಿ ಶ್ರೀಮತಿ ಉಷಾ ನಂದಿನಿ ನಾರಾಯಣ ಸ್ವಾಮಿಯವರ ಮಾರ್ಗದರ್ಶನದಲ್ಲಿ ಶ್ರದ್ಧೆಯಿಂದ ವ್ಯಾಸಂಗ ಮಾಡಿದ್ದಕ್ಕೆ ನನಗೆ ಇಂದು 10ನೇ ರ್‍ಯಾಂಕ್ ಪಡೆಯಲು ಸಾಧ್ಯವಾಗಿದೆ ಎಂದರು.

ನನ್ನ ವೃತ್ತಿ ಜೀವನದಲ್ಲಿ ಸಹ ಇದೇ ರೀತಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ರಾಜಕಾರಣಿಗಳ ಮಕ್ಕಳು ರಾಜಕಾರಣಿಗಳಾಗುತ್ತಾರೆ. ಆದರೆ ನಾನು ಸಮಾಜ ಸೇವೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಮುಂದುವರೆಯುವುದು ನನಗೆ ಇಷ್ಟವಾಗಿದ್ದು, ಅದು ಸಾಕಾರಗೊಂಡಿದೆ ಎಂದರು. ಜ್ಯೂನಿಯರ್ ಡಾಕ್ಟರ್ ಅಸೋಸಿಯೇಷನ್ ಉಪಾಧ್ಯಕ್ಷರಾಗಿ ಕೂಡ ಕಾರ್ಯನಿರ್ವಹಿಸುತ್ತಿದ್ದೇನೆ ಎಂದರು.

ಸಮಾರಂಭದಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕುಲಪತಿ ಡಾ॥ ಸಚ್ಚಿದಾನಂದ, ಡಾ॥ಮುರುಗೇಶ್, ಎಂ.ಜಿ. ರಾಜಶೇಖರ್, ಡಾ॥ ಕುಮಾರ ಡಿ.ಎಸ್., ಡಾ॥ ರವೀಂದ್ರ ಬಣಕಾರ್, ಡಾ॥ ಸತ್ಯನಾರಾಯಣ, ವಿಧಾನಪರಿಷತ್ ಸದಸ್ಯರಾದ ವೈ.ಎ. ನಾರಾಯಣ ಸ್ವಾಮಿ, ಪ್ರಜ್ಞಾನಾರಾಯಣ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ADVT

## ನಗರದಲ್ಲಿ ಇಂದು ಕಬ್ಬಿಗರ ಕಬ್ಬದೂಟ ಕವಿಗೋಷ್ಠಿ

ಗ್ರಂಥ ಸರಸ್ವತಿ ಪ್ರತಿಭಾರಂಗ ಆಶ್ರಯದಲ್ಲಿ ಕನ್ನಡ ಕಬ್ಬ ಉಗಾದಿ ಹಬ್ಬ-126 ಕಾರ್ಯಕ್ರಮದಡಿ 'ಕಬ್ಬಿಗರ ಕಬ್ಬದೂಟ' ಜಿಲ್ಲಾ ಕವಿಗೋಷ್ಠಿ ಇಂದು ಸಂಜೆ 6 ಕ್ಕೆ ವಿದ್ಯಾನಗರ ಉದ್ಯಾನವನದ ಕಾವ್ಯಮಂಟಪದಲ್ಲಿ ನಡೆಯಲಿದೆ.

ದಿವ್ಯ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಕಾರ್ಯಕ್ರಮವನ್ನು ಡಾ. ಗಾಯತ್ರಿ ದೇವರಾಜ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಡಾ. ಗಂಗಾಧರಯ್ಯ ಹಿರೇಮಠ, ರವಿಚಂದ್ರ ಆಗಮಿಸುವರು. ಆರ್ ಶಿವಕುಮಾರಸ್ವಾಮಿ ಕುರ್ಕಿ ಅಧ್ಯಕ್ಷತೆ ವಹಿಸುವರು.

ಕು. ಸಂಗೀತಾ ಬಿ. ಹಿರೇಮಠ ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತ ನಡೆಸಿ ಕೊಡುವರು.

ಇದೇ ಸಂದರ್ಭದಲ್ಲಿ ರಂಗಚೇತನ ಕಲಾ ಸಂಘದಿಂದ 'ತವರು ಮನೆ' ನಾಟಕ ಪ್ರದರ್ಶನಗೊಳ್ಳಲಿದೆ. ಹಿರಿಯ ರಂಗಭೂಮಿ ಕಲಾವಿದ ಕೆ.ವೀರಯ್ಯ ಸ್ವಾಮಿ ಅವರ ನಿರ್ದೇಶನ ಮತ್ತು ಮಾರುತೇಶ್ ಮಾಂಡ್ರೆ ಅವರ ರಚನೆಯ ಈ ನಾಟಕವನ್ನು ಸಾರ್ವಜನಿಕರು ವೀಕ್ಷಿಸುವುದರ ಮೂಲಕ ಪ್ರೋತ್ಸಾಹಿಸುವಂತೆ ಕೋರಲಾಗಿದೆ.

## ವೀರಶೈವ ಲಿಂಗಾಯತ ಜಂಗಮರಿಗೆ ಎಸ್ಸಿ ಮೀಸಲಾತಿ : ದಸಂಸ ವಿರೋಧ

ದಾವಣಗೆರೆ, ಫೆ.19- ವೀರಶೈವ ಲಿಂಗಾಯತ ಜಾತಿಗೆ ಸೇರಿದ ಜಂಗಮರನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡುವುದನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದು ಸಮಿತಿ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೇಡ ಜಂಗಮರಿಗೆ ಎಸ್ಸಿ ಮೀಸಲಾತಿ ಪ್ರಮಾಣಪತ್ರ ನೀಡುವುದಕ್ಕೆ ನಮ್ಮ ವಿರೋಧವಿಲ್ಲ. ಬೇಡ ಜಂಗಮರ ಹೆಸರಿನಲ್ಲಿ ವೀರಶೈವ ಲಿಂಗಾಯತ ಜಂಗಮರು ಪ್ರಮಾಣ ಪತ್ರ ಪಡೆಯಲು ಮುಂದಾಗಿದ್ದು, ಈ ರೀತಿ ಪ್ರಮಾಣ ಪತ್ರ ನೀಡಿದ್ದೇ ಆದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಬೇಡ ಜಂಗಮರು ಕಾಡಿನಲ್ಲಿ ವಾಸಿಸುವವರಾಗಿದ್ದು, ಅಲೆಮಾರಿಗಳಾಗಿದ್ದಾರೆ. ಅವರು ಆರ್ಥಿಕವಾಗಿ ತೀರಾ ಹಿಂದುಳಿದಿದ್ದು ಇವರು ಆಂಧ್ರ ಮೂಲದವರಾಗಿದ್ದಾರೆ. ರಾಜ್ಯದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿಯಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ ಎಂದು ವಿವರಿಸಿದರು.

ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದಿದ್ದು, ಇವರಿಗೆ ನ್ಯಾಯ ಒದಗಿಸಲು ಸಂವಿಧಾನದಲ್ಲಿ ಮೀಸಲಾತಿ ಪ್ರಕಟಿಸಲಾಗಿದೆ. ಆದರೆ ವೀರಶೈವ ಲಿಂಗಾಯತ ಜಂಗಮರು ಮೀಸಲಾತಿಗೆ ಮುಂದಾಗಿರುವುದು ಸರಿಯಲ್ಲ ಎಂದರು. ಪ್ರಗತಿಪರ ಸ್ವಾಮೀಜಿ, ಜಾತ್ಯತೀತ ಮಠದ ಪೀಠಾಧ್ಯಕ್ಷರೂ ಆಗಿರುವ ನಿಡುಮಾಮಿಡಿ ಶ್ರೀಗಳು ಜಂಗಮರಿಗೆ ಮೀಸಲಾತಿ ಕೊಡಿಸಲು ನೇತೃತ್ವ ವಹಿಸುತ್ತಿರುವುದನ್ನು ನೋಡಿದರೆ ಜಾತಿವಾದಿ ಸ್ವಾಮೀಜಿ ಎಂಬುದು ಸಾಬೀತಾದಂತೆ ಆಗುತ್ತದೆ ಎಂದು ಹೇಳಿದರು.

ಪರಿಶಿಷ್ಟರ ಮೀಸಲಾತಿ ಕಬಳಿಸುವ ಹುನ್ನಾರ ನಡೆಸುತ್ತಿರುವ ವೀರಶೈವ ಹೋರಾಟಕ್ಕೆ ಸರ್ಕಾರ ಮಾನ್ಯತೆ ನೀಡಬಾರದು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪುರದಾಳು ಪರಮೇಶ್, ಗೋಪನಾಳು ಚಂದ್ರಪ್ಪ, ಬಾತಿ ಸಿದ್ದೇಶ್, ಪ್ರದೀಪ್, ಬೇತೂರು ಹನುಮಂತಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸರ್ವಜ್ಞ ಜಯಂತಿ

ಸಂತ ಕವಿ ಸರ್ವಜ್ಞ ಜಯಂತಿಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಗುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.


## ದಾಖಲೆಗಳು ಕಳೆದಿವೆ

ದಾವಣಗೆರೆ ಚಿರಂಜೀವಿ ಮೊಬೈಲ್ ಮಾರ್ಟ್‌ಗೆ ಸಂಬಂಧಿಸಿದ ಆಕ್ಸಿಸ್ ಬ್ಯಾಂಕ್ ಚಾಲ್ತಿ ಖಾತೆ ಸಂಖ್ಯೆ 917020038496492 ಮತ್ತು ಅರ್ಬನ್ ಬ್ಯಾಂಕ್ ಪಿ.ಬಿ ರಸ್ತೆ, ದಾವಣಗೆರೆ ಚಾಲ್ತಿ ಖಾತೆ ಸಂಖ್ಯೆ 00020030005773 ಹಾಗೂ ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಮಂಡಿಪೇಟೆ ಉಳಿತಾಯ ಖಾತೆ 074301000010075ಗೆ ಸಂಬಂಧಿಸಿದ ಚೆಕ್ ಪುಸ್ತಕಗಳು ಹಾಗೂ ಅಂಗಡಿಯ ಇನ್ನಿತರೆ ದಾಖಲೆಗಳು ಕಳೆದಿದ್ದು ಸದರಿ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ಮೊಬೈಲ್‌ಗೆ ಸಂಪರ್ಕಿಸಲು ಕೋರಿದೆ.

96860 48070



## ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ, ಮಲೇಬೆನ್ನೂರು.

ಪ್ರಧಾನ ಕಛೇರಿ, ಮಲೇಬೆನ್ನೂರು ಶಾಖೆ : ನಂದಿಗುಡಿ, ಹರಿಹರ ತಾಲ್ಲೂಕು

### ಸೌಹಾರ್ದ ಸಹಕಾರಿಯ 2019-2020ನೇ ಸಾಲಿನ ಪ್ರಥಮ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟಿಸ್

2019-20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿ. : 21.02. 2021ನೇ ಭಾನುವಾರ ಬೆಳಗ್ಗೆ 10.30 ಗಂಟೆಗೆ ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದಲ್ಲಿರುವ ಶ್ರೀ ಪವನದೇವ ಕಲ್ಯಾಣ ಮಂಟಪದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹೆಚ್. ವೀರನಗೌಡ ಇವರ ಘನ ಅಧ್ಯಕ್ಷತೆಯಲ್ಲಿ ಮಹಾಸಭೆಯನ್ನು ಕರೆಯಲಾಗಿದೆ. ಆದ್ದರಿಂದ ಮಾನ್ಯ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಸೌಹಾರ್ದ ಸಹಕಾರಿ ಪ್ರಗತಿಯ ಪಕ್ಷಿನೋಟ

| ವಿವರಗಳು | ದಿನಾಂಕ : 31.03.2019ಕ್ಕೆ | ದಿನಾಂಕ : 31.03.2020ಕ್ಕೆ |
|---|---|---|
| 1) ಷೇರು ಬಂಡವಾಳ | 59,59,400-00 | 64,88,300-00 |
| 2) ಸದಸ್ಯರ ಸಂಖ್ಯೆ | 2,732 | 2,772 |
| 3) ಠೇವಣಾತಿಗಳು | 8,02,69,264-50 | 8,94,80,023-50 |
| 4) ನಿಧಿಗಳು | 1,91,62,934-19 | 2,18,18,183-36 |
| 5) ಸದಸ್ಯರಿಗೆ ಸಾಲ | 6,89,23,016-00 | 7,81,62,594-00 |
| 6) ವಾರ್ಷಿಕ ವಹಿವಾಟು | 33,71,48,031-92 | 41,06,85,004-27 |
| 7) ದುಡಿಯುವ ಬಂಡವಾಳ | 11,80,51,856-00 | 13,17,45,694-00 |
| 8) ನಿವ್ವಳ ಲಾಭ | 25,03,757-00 | 28,25,646-00 |
| 9) ಆಡಿಟ್ ಶ್ರೇಣಿ | 'ಬಿ' | 'ಬಿ' |
| 10)ಸದಸ್ಯರಿಗೆ ಡಿವಿಡೆಂಡ್ | 13 % | 11 % ಉದ್ದೇಶಿತ |

### ಸಂಘದ ಆಡಳಿತ ಮಂಡಳಿ



ಶ್ರೀ ಹೆಚ್. ವೀರನಗೌಡ್ರು, ಅಧ್ಯಕ್ಷರು, ಹಳ್ಳಿಹಾಳ್ · ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ, ಉಪಾಧ್ಯಕ್ಷರು, ಜಿ.ಬೇವಿನಹಳ್ಳಿ · ಇಂದೂಧರ ಎನ್. ರುದ್ರಗೌಡ, ನಿರ್ದೇಶಕರು, ಜಿಗಳಿ. · ಹೆಚ್.ಟಿ. ಶಾಂತನಗೌಡ, ನಿರ್ದೇಶಕರು, ಹಳ್ಳಿಹಾಳ್. · ಗೌಡ್ರ ಬಸವರಾಜಪ್ಪ, ನಿರ್ದೇಶಕರು, ಜಿಗಳಿ. · ಹೆಚ್.ಟಿ. ಪರಮೇಶ್ವರಪ್ಪ, ನಿರ್ದೇಶಕರು, ಹಳ್ಳಿಹಾಳ್.



ಎಂ.ವಿ. ನಾಗರಾಜ್, ನಿರ್ದೇಶಕರು, ಜಿಗಳಿ · ಬಿ.ಹೆಚ್. ರವಿ, ನಿರ್ದೇಶಕರು, ಕೊಕ್ಕನೂರು. · ಕೆ.ಹೆಚ್. ಆಂಜನೇಯ, ನಿರ್ದೇಶಕರು, ಕೊಕ್ಕನೂರು. · ಸಂತೋಷ್ ಪಾಳೇದ, ನಿರ್ದೇಶಕರು, ಜಿ.ಬೇವಿನಹಳ್ಳಿ. · ಭಾಗ್ಯ ಉದಯಗೌಡ, ನಿರ್ದೇಶಕರು, ಹಿಂಡಸಘಟ್ಟ. · ಎ. ಆರೀಫ್ ಅಲಿ, ನಿರ್ದೇಶಕರು, ಮಲೇಬೆನ್ನೂರು.



ಟಿ. ರಾಮಚಂದ್ರಪ್ಪ, ನಿರ್ದೇಶಕರು, ಕೊಕ್ಕನೂರು. · ಆರ್. ನಾಗರಾಜ, ನಿರ್ದೇಶಕರು, ಕೊಕ್ಕನೂರು. · ಎ.ಕೆ. ತಿಪ್ಪೇಶಪ್ಪ, ನಿರ್ದೇಶಕರು, ಹಳ್ಳಿಹಾಳ್. · ಹೆಚ್.ಎಂ. ಬಸವರಾಜ್, ಕಾರ್ಯದರ್ಶಿ

ಸೂಚನೆ : ಇತ್ತೀಚಿನ ಸೌಹಾರ್ದ ಸಂಯುಕ್ತ ಸಹಕಾರಿ ಕಾಯ್ದೆಯ ತಿದ್ದುಪಡಿಯ ಪ್ರಕಾರ ಸಹಕಾರಿಯ ಸದಸ್ಯರು ಸಹಕಾರಿಯ 3 ನಿರಂತರ ಮಹಾಸಭೆಗೆ ಹಾಜರಾಗಿಲ್ಲದಿದ್ದರೆ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಪಾಲ್ಗೊಂಡು ಮತ ಚಲಾಯಿಸಲು ಅನರ್ಹರಾಗಿರುತ್ತಾರೆ. 1) ಒಂದು ವರ್ಷದ ಅವಧಿಯಲ್ಲಿ ಕನಿಷ್ಠ ರೂ 1000/- ಗಳ ವ್ಯಾಪಾರ ವಹಿವಾಟನ್ನು ನಡೆಸಬೇಕು. 2) ಸಹಕಾರಿಯ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ (ಪಿಗ್ಮಿ ಹೊರತುಪಡಿಸಿ) ಕನಿಷ್ಠ ರೂ 1000/- ಒಂದು ವರ್ಷ ವಾದರೂ ತೊಡಗಿಸ ಬೇಕು. ಈ ನಿಬಂಧನೆಗಳಲ್ಲಿ ಕನಿಷ್ಠ ಒಂದನ್ನಾದರೂ ಸತತ ಎರಡು ವರ್ಷ ಪಾಲಿಸದ ಸದಸ್ಯರು ಚುನಾವಣೆಯಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಅನರ್ಹರಾಗಿರುತ್ತಾರೆ.

ವಿ.ಸೂ. : ಈಗಾಗಲೇ ಸಂಘದ ಎಲ್ಲಾ ಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ. ಸಭೆಗೆ ಆಗಮಿಸುವ ಸದಸ್ಯರು ಖಡ್ಡಾಯವಾಗಿ ಮಾಸ್ಕ್ ಧರಿಸಿ, ಸಮಾಜಿಕ ಅಂತರವನ್ನು ಕಾಪಾಡಬೇಕಾಗಿ ವಿನಂತಿ.

## ಹರಿಹರದಲ್ಲಿ ರಥಸಪ್ತಮಿ ಆಚರಣೆ



ಹರಿಹರ, ಫೆ.19- ನಗರದ ಗಾಂಧಿ ಮೈದಾನದಲ್ಲಿ ಇಂದು ಕ್ರೀಡಾ ಭಾರತಿ ಹಾಗೂ ಜಿಲ್ಲೆಯ ಟೈಕೊಂಡೋ ಸಂಸ್ಥೆ ವತಿಯಿಂದ ರಥಸಪ್ತಮಿ ಅಂಗವಾಗಿ ಸೂರ್ಯ ನಮಸ್ಕಾರದ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮಕ್ಕೆ ಮಾಜಿ ಶಾಸಕ ಬಿ.ಪಿ. ಹರೀಶ್ ಹಾಗೂ ಶಿವಮೊಗ್ಗ ವಿಭಾಗದ ಸಹ ಸೇವಾಪ್ರಮುಖ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಿದ್ದಲಿಂಗ ಸ್ವಾಮಿ ಹಾಗೂ ಹರಿಹರ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ವಿಷಯ ಪರಿವೀಕ್ಷಕ ಗುರುಬಸಪ್ಪ ಎಸ್.ಜಿ ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆ ಹನುಮಂತರಾಜು ನಂದಿಗಾವಿ ನಡೆಸಿಕೊಟ್ಟರು. ಯೋಗದಲ್ಲಿ ಅಂತರರಾಷ್ಟ್ರೀಯ ಸಾಧನೆ ಮಾಡಿದ ಸಾವಿತ್ರಮ್ಮ ಮತ್ತು ಇತರರಿಗೆ ಸನ್ಮಾನಿಸಲಾಯಿತು. ಟೈಕೊಂಡು ತರಬೇತಿದಾರರಾದ ಪ್ರಭಾಕರ್, ರಮೇಶ್, ಸ್ಕ್ಯಾಯ್ ತರಬೇತುದಾರರಾದ ರವಿ ಕುಮಾರ್ ಜಿ.ಬಿ. ಹಾಗೂ ದೈಹಿಕ ಶಿಕ್ಷಕರಾದ ಸೌಮ್ಯ ಬೆಣ್ಣೆ ಹಾಗೂ ಯೋಗ ಶಿಕ್ಷಕ ಜಯರಾಮ್ ಉಪಸ್ಥಿತರಿದ್ದರು.

## ಲಂಚ ಎಂದು ವರಿಷ್ಠರಿಗೆ ದೂರು

(1ನೇ ಪುಟದಿಂದ) ಹೇಳಿಕೊಳ್ಳುತ್ತಿದ್ದಾರೆ.

ಯತ್ನಾಳ್ ರೀತಿಯಲ್ಲಿ ಬಹಿರಂಗವಾಗಿ ಶಾಸಕರು ಹೇಳಿಕೊಳ್ಳಲು ಇಚ್ಛೆಪಡುವುದಿಲ್ಲ. ಬಹಿರಂಗವಾಗಿ ಹೇಳಿದರೆ, ಪಕ್ಷ ವಿರೋಧಿ ಚಟುವಟಿಕೆ ಎಂದು ಹಣೆಪಟ್ಟಿ ಕಟ್ಟಿ ತಮ್ಮನ್ನು ರಾಜಕೀಯವಾಗಿ ತುಳಿಯಬಹುದು.

ವರಿಷ್ಠರಿಗೆ ಹತ್ತಿರವಿರುವ ಪ್ರಧಾನ ಕಾರ್ಯದರ್ಶಿ ಅವರಿಗೆ ನಮಗಾಗುತ್ತಿರುವ ನೋವುಗಳನ್ನು ಹೇಳಿಕೊಂಡರೆ, ಸಮಸ್ಯೆ ಬಗೆಹರಿಯಬಹುದೆಂಬ ಭಾವನೆಯನ್ನು ಸರ್ಕಾರದ ಮಟ್ಟದಲ್ಲಿ ಅಧಿಕಾರಿಗಳಿಂದ ತಮಗಾಗುತ್ತಿರುವ ಕಿರುಕುಳಗಳ ಬಗ್ಗೆ ಹೇಳಿಕೊಂಡು ಪರಿಹಾರ ಕೋರಿದ್ದಾರೆ. ಇದು ಒಬ್ಬಿಬ್ಬ ಶಾಸಕರದ್ದಲ್ಲದೆ, ರವಿ ಅವರು ಬೆಂಗಳೂರಿನಲ್ಲಿ ಉಳಿದುಕೊಂಡ ಸಂದರ್ಭದಲ್ಲಿ ಪ್ರತಿನಿತ್ಯ 20 ರಿಂದ 30 ಶಾಸಕರು ಭೇಟಿ ಮಾಡುತ್ತಾರೆ ಎಂದು ಮೂಲಗಳು ಹೇಳಿವೆ.

## ಹರಿಹರ : ಶಿವಾಜಿ ಮಹಾರಾಜರ ಜಯಂತಿ



ಹರಿಹರ, ಫೆ.19- ನಗರದಲ್ಲಿ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯೋತ್ಸವದ ನಿಮಿತ್ತವಾಗಿ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಸಡಗರ ಸಂಭ್ರಮದಿಂದ ನಡೆಯಿತು.

ಮೆರವಣಿಗೆಯಲ್ಲಿ ಟೈಟಾನಿಕ್ ಹಡಗಿನಲ್ಲಿ ಶಿವಾಜಿ ಮಹಾರಾಜರ ಮೂರ್ತಿಯನ್ನು ಇಡಲಾಗಿತ್ತು. ಮಹಾರಾಷ್ಟ್ರದ ನಾಸಿಕ್ ಡೋಲ್ ಮತ್ತು ಇತರೆ ಭಾಜಾಭಜಂತ್ರಿಗಳು ಮೆರವಣಿಗೆಗೆ ಕಳೆ ನೀಡಿದ್ದವು. ಮೆರವಣಿಗೆಯು ರಾಜಬೀದಿಗಳಲ್ಲಿ ಸಂಚರಿಸಿತ್ತು. ಈ ಸಂದರ್ಭದಲ್ಲಿ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಮರಾಠ ಸಮಾಜದ ಅಧ್ಯಕ್ಷ ಮರಿಯೋಜಿ ರಾವ್, ನಂದಿಗಾವಿ ಶ್ರೀನಿವಾಸ್, ಅಜಿತ್ ಸಾವಂತ್, ಹಾರನಹಳ್ಳಿ ಮಂಜುನಾಥ್ ಇತರರು ಹಾಜರಿದ್ದರು.

ಪಿಎಸ್ಐ ಸುನಿಲ್ ಬಸವರಾಜ್ ತೆಲಿ ಮತ್ತು ಪೊಲೀಸ್ ಸಿಬ್ಬಂದಿಗಳು ಮೆರವಣಿಗೆಗೆ ಬಂದೋಬಸ್ತ್ ಒದಗಿಸಿದ್ದರು.

# ಮಹಾತ್ಮರ ಜಯಂತಿಗಳ ಆಚರಣೆಯಿಂದ ಸಮುದಾಯಗಳು ಮುಖ್ಯವಾಹಿನಿಗೆ



ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ಎಸ್.ವಿ. ರಾಮಚಂದ್ರ

ಜಗಳೂರು, ಫೆ.19 - ಸಮುದಾಯಗಳು ಮುಖ್ಯವಾಹಿನಿಗೆ ಬರಲು ಮಹನೀಯರ ಜಯಂತಿಗಳ ಆಚರಣೆಗಳು ಅಗತ್ಯವಾಗಿವೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ಸವಿತಾ ಮಹರ್ಷಿ, ಛತ್ರಪತಿ ಶಿವಾಜಿ, ಸರ್ವಜ್ಞ ಜಯಂತಿಗಳ ಸರಳ ಆಚರಣೆಯಲ್ಲಿ ಭಾಗವಹಿಸಿ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಎಲ್ಲಾ ಸಮಾಜಗಳ ಮಹಾ ಪುರುಷರನ್ನು ಜಯಂತಿಗಳಿಗೆ ಸೀಮಿತಗೊಳಿಸದೆ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಸಾರ್ಥಕತೆ ಸಿಗುವುದು. ತಾಲ್ಲೂಕಿನಲ್ಲಿ ಎಲ್ಲಾ ಸಮಾಜದವರು ಅನ್ಯೋನ್ಯತೆಯಿಂದ ಜೀವನ ಸಾಗಿಸುತ್ತಿದ್ದು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಜೊತೆಗೆ ಪ್ರಜ್ಞಾವಂತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕಿದೆ. ಎಂದರು.

ತಾಲ್ಲೂಕಿನ ರೈತರು ಮುಂದಿನ ದಿನಗಳಲ್ಲಿ ಕೇವಲ ಮಳೆಯಾಶ್ರಿತರಾಗದೆ ನೀರಾವರಿ ಸೌಲಭ್ಯ ದೊರಕಿಸಿ, ಸಮೃದ್ಧಿ ಜೀವನ ಸಾಗಿಸುವ ಕಾಲ ಸನ್ನಿಹಿತವಾಗಿದೆ. ಎಲ್ಲರೂ ಒಗ್ಗೂಡಿ ಜಯಂತಿ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ಆಚರಿಸೋಣ ಎಂದು ಭರವಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್, ತಾ.ಪಂ ಇಓ ಮಲ್ಲಾನಾಯ್ಕ, ಬಿಇಓ ವೆಂಕಟೇಶ್, ಸವಿತಾ ಸಮಾಜದ ತಾಲ್ಲೂಕು ಅಧ್ಯಕ್ಷ ನರಸಿಂಹಮೂರ್ತಿ, ಮುಖಂಡರಾದ ಮಲ್ಲಿಕಾರ್ಜುನ್, ಸತೀಶ್ ರಾಜಣ್ಣ, ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಅಜ್ಜಪ್ಪ ನಾಡಿಗರ್, ಆರ್.ಐ. ಕುಬೇಂದ್ರ ನಾಯ್ಕ ಮತ್ತಿತರರಿದ್ದರು.

## ಎಂಸಿಸಿ 'ಬಿ' ಬ್ಲಾಕ್‌ನ ದೂಡಾ ಪಾರ್ಕ್ ಒತ್ತುವರಿ ತೆರವು



(1ನೇ ಪುಟದಿಂದ) ಕ್ರಮವಿಲ್ಲವೇ? ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಶಿವಕುಮಾರ್, ಯಾರೇ ಆಗಲಿ ನಿವೇಶನ ಖರೀದಿಸುವಾಗ ಇಲ್ಲವೇ ಮನೆ ಕಟ್ಟಿಸುವಾಗ ದೂಡಾದ ಬಳಿ ದಾಖಲೆ ಪರಿಶೀಲಿಸಿಕೊಳ್ಳಬೇಕು. ದೂಡಾದ ಜಾಗದಲ್ಲಿ ಮನೆ ಕಟ್ಟಿದವರ ವಿರುದ್ಧ ಪ್ರಕರಣ ದಾಖಲಿಸಬೇಕಾಗುತ್ತದೆ. ಅಕ್ರಮವಾಗಿ ಮನೆ ಕಟ್ಟಿಕೊಂಡಿರುವವರು ವಂಚನೆಗೆ ಗುರಿಯಾಗಿದ್ದಾರೆ ಎಂಬ ಭಾವನೆಯಿಂದ ಅನುಕಂಪ ತೋರಿಸಿ ಅವರ ವಿರುದ್ಧ ಪ್ರಕರಣ ದಾಖಲಿಸುತ್ತಿಲ್ಲ ಎಂದು ಹೇಳಿದರು.

ತೆರವುಗೊಳಿಸಲಾಗಿರುವ ಪಾರ್ಕ್ ಅಭಿವೃದ್ಧಿಪಡಿಸಿ ಅನುಕೂಲ ಮಾಡಿಕೊಂಡುವಂತೆ ಸ್ಥಳೀಯರಾದ ಸಿ.ಜಿ. ಉಮೇಶ್, ಅನಿತ ಮತ್ತಿತರರು ಮನವಿ ಮಾಡಿಕೊಂಡಿದ್ದಕ್ಕೆ ಸ್ಪಂದಿಸಿದ ಶಿವಕುಮಾರ್, ದೂಡಾ ವತಿಯಿಂದ ಮೂರ್ನಾಲ್ಕು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಪಾರ್ಕನ್ನೂ ಅಭಿವೃದ್ಧಿಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ದೂಡಾ ಸದಸ್ಯೆ ದೇವೀರಮ್ಮ, ಎಇಇ ಶ್ರೀಕರ್, ದೂಡಾ ಇಂಜಿನಿಯರ್ ಅಕ್ಷತ ಮತ್ತಿತರರು ಉಪಸ್ಥಿತರಿದ್ದರು.

### ದೂಡಾ ದಾಖಲೆಗಳ ಡಿಜಿಟಲೀಕರಣ

ದೂಡಾ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಇದರಿಂದಾಗಿ ಜನರು ತಮ್ಮ ಮೊಬೈಲ್ ಮೂಲಕವೇ ಬಡಾವಣೆ ಹಾಗೂ ನಿವೇಶನಗಳ ಮಾಹಿತಿ ಪಡೆಯಬಹುದು. ಇದರಿಂದಾಗಿ ಅಕ್ರಮ ನಡೆಯುವುದು ತಪ್ಪಲಿದೆ ಎಂದು ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಸಾರ್ವಜನಿಕರು ನಿವೇಶನ ಖರೀದಿಸುವುದಕ್ಕೆ ಮುಂಚೆ ದೂಡಾ ಬಳಿ ಬಂದು ನಿವೇಶನದ ದಾಖಲೆಗಳನ್ನು ಪರಿಶೀಲಿಸಿಕೊಳ್ಳಬೇಕಾಗುತ್ತದೆ. ಸಾರ್ವಜನಿಕರಿಗೆ ಇದರ ತಿಳುವಳಿಕೆ ಇಲ್ಲದೇ ಅಕ್ರಮಗಳಿಗೆ ಬಲಿಯಾಗುತ್ತಿದ್ದಾರೆ. ಇದನ್ನು ತಡೆಯಲು ದಾಖಲೆಗಳ ಡಿಜಿಟಲೀಕರಣ ಮಾಡಿ ಜನರ ಬೆರಳ ತುದಿಯಲ್ಲೇ ದಾಖಲೆ ಲಭ್ಯವಾಗುವಂತೆ ಮಾಡಲಾಗುವುದು ಎಂದವರು ಹೇಳಿದ್ದಾರೆ.

## ಹರಪನಹಳ್ಳಿಯಲ್ಲಿ ಶ್ರೀ ಸವಿತಾ ಮಹರ್ಷಿ, ಛತ್ರಪತಿ ಶಿವಾಜಿ ಜಯಂತಿ ಆಚರಣೆ



ಹರಪನಹಳ್ಳಿ, ಫೆ.19 - ಕೊರೊನಾ ಹಿನ್ನೆಲೆಯಲ್ಲಿ ಶ್ರೀ ಸವಿತಾ ಮಹರ್ಷಿ ಹಾಗೂ ಛತ್ರಪತಿ ಶಿವಾಜಿ ಜಯಂತಿಯನ್ನು ಪಟ್ಟಣದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು. ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ, ತಹಶೀಲ್ದಾರ್ ಎಲ್.ಎಂ.ನಂದೀಶ್ ಸೇರಿದಂತೆ ತಾಲ್ಲೂಕು ಸವಿತಾ ಮತ್ತು ಮರಾಠ ಸಮುದಾಯದ ಮುಖಂಡರು, ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಕಂದಾಯ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮಾರ್ಗಸೂಚಿಗೆ ಆದೇಶ

(1ನೇ ಪುಟದಿಂದ) ಮನೆಯಲ್ಲಿಟ್ಟುಕೊಳ್ಳಲು ಹಿಂಜರಿಯುತ್ತಿದ್ದಾರೆ. ಇದರಿಂದಾಗಿ ಲಾಕರ್‌ಗಳಂತಹ ಸೇವೆಗಳು ಜಪ್ರಿಯವಾಗಿದ್ದು, ಅಗತ್ಯ ಸೇವೆಗಳಾಗುತ್ತಿವೆ. ಇಂತಹ ಸೇವೆಗಳು ಭಾರತೀಯರಿಗಷ್ಟೇ ಅಲ್ಲದೇ ವಿದೇಶಿಯರಿಗೂ ಲಭ್ಯವಿರಬೇಕು ಎಂದು ಪೀಠ ತಿಳಿಸಿದೆ.

ಅಲ್ಲದೇ ಲಾಕರ್‌ಗಳು ಎರಡು ಕೀಲಿ ವ್ಯವಸ್ಥೆಯಿಂದ ಎಲೆಕ್ಟ್ರಾನಿಕ್ ಸ್ವರೂಪಕ್ಕೆ ಹೋಗುತ್ತಿವೆ. ಎಟಿಎಂ ಪಿನ್ ಇಲ್ಲವೇ ಪಾಸ್‌ವರ್ಡ್ ಮೂಲಕ ಲಾಕರ್ ಬಳಸಬಹುದು. ಗ್ರಾಹಕರಿಗೆ ಈ ತಂತ್ರಜ್ಞಾನದ ತಿಳುವಳಿಕೆ ಇಲ್ಲದಿರುವ ಸಾಧ್ಯತೆಯೂ ಇದೆ. ದುಷ್ಕರ್ಮಿಗಳು ಗ್ರಾಹಕರಿಗೆ ತಿಳಿಯದಂತೆ ಲಾಕರ್ ಬಳಸುವ ಸಾಧ್ಯತೆಯೂ ಇದೆ ಎಂದು ನ್ಯಾಯಾಲಯ ಹೇಳಿದೆ.

ಬ್ಯಾಂಕುಗಳು ಹೆಚ್ಚು ಸಂಪನ್ಮೂಲ ಹೊಂದಿರುವ ಕಾರಣ ಗ್ರಾಹಕರು ಅವರ ಮೇಲೆ ಹೆಚ್ಚು ಅವಲಂಬಿತರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ಬ್ಯಾಂಕುಗಳು ಲಾಕರ್ ಕಾರ್ಯನಿರ್ವಹಣೆಯ ವಿಷಯದಲ್ಲಿ ಕೈ ತೊಳೆದುಕೊಳ್ಳಲಾಗದು. ಲಾಕರ್‌ಗಳಲ್ಲಿ ಆಸ್ತಿ ಇಟ್ಟರೆ ನೆಮ್ಮದಿಯಾಗಿರಬಹುದು ಎಂಬ ಕಾರಣಕ್ಕಾಗಿಯೇ ಗ್ರಾಹಕರು ಅವುಗಳನ್ನು ಪಡೆಯುತ್ತಾರೆ. ಲಾಕರ್ ಸುರಕ್ಷತೆಯಲ್ಲಿ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ನ್ಯಾಯಾಲಯ ಹೇಳಿದೆ.

## ಶಿವಾಜಿ ಮಹಾರಾಜರ ತೊಟ್ಟಿಲೋತ್ಸವ



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ.19- ಇಲ್ಲಿನ ದೊಡ್ಡಪೇಟೆಯ ತುಕ್ಕಾಭವಾನಿ ದೇವಸ್ಥಾನದಲ್ಲಿ ತಾಲ್ಲೂಕು ಕ್ಷತ್ರಿಯ ಶಿವಾಜಿ ಮರಾಠ ಸಮಾಜದ ವತಿಯಿಂದ ಶಿವಾಜಿ ಜಯಂತ್ಯುತ್ಸವದ ಅಂಗವಾಗಿ ಬಾಲ ಛತ್ರಪತಿ ಶಿವಾಜಿ ಮಹಾರಾಜರ ತೊಟ್ಟಿಲೋತ್ಸವ ನೆರವೇರಿತು.

ಗಂಗಾ ಪೂಜೆ ನೆರವೇರಿಸಿದ ನಂತರ ನೆರೆದಿದ್ದ ಮಹಿಳೆಯರು, ವಿವಿಧ ಹೂಗಳಿಂದ ಶೃಂಗರಿಸಿದ ತೊಟ್ಟಿಲಿಗೆ ಬಾಲ ಛತ್ರಪತಿಯ ಭಾವಚಿತ್ರವನ್ನು ಹಾಕಿ ನಾಮಕರಣ ಮಾಡುವ ಮೂಲಕ ಜೋಗುಳ ಹಾಡಿ ಬಾಲ ಶಿವಾಜಿಯ ತೊಟ್ಟಿಲು ತೂಗಿದರು.

ಪವಿತ್ರಕುಮಾರ ನಾಗೇನಹಳ್ಳಿ, ಶಿವಮೂರ್ತಿ ದಿಲ್ಲಿವಾಲಾ, ಶಿವಾನಂದ ಆರೇರ, ಶಿವಾಜಿ ಮಾಕನೂರ, ಪರಶುರಾಮ ಕಾಳೇರ, ಎಂ.ಎಸ್. ಜಾಧವ್, ನರಸಿಂಹ ಮರಾಠೆ, ಮಾರುತಿ ಜಾಧವ್, ಅರವಿಂದ ಬಣಕಾರ, ಉದಯ ಗಾವಡೆ, ಅನಿಲ್ ಸಿಂಧೆ, ಖಂಡೋಜಿ ತೋಡೇಕರ, ರಘು ಚವ್ಹಾಣ, ರಾಜು ಜಾಧವ್, ಸುಭಾಸ್ ಸೂರ್ಯವಂಶಿ, ಸರ್ವಮಂಗಳ ಮಾಕನೂರ, ಕಾಶೀಬಾಯಿ ಮಾದಾಪುರ, ಶಶಿಕಲಾ ಆರೇರ, ಯಲ್ಲಮ್ಮ ಜಾಧವ, ಮಮತಾ ಜಾಧವ, ಶಶಿಕಲಾ ಮರಾಠೆ, ಗಂಗಾ ಜಾಧವ, ನಿರ್ಮಲಾ ಚವ್ಹಾಣ, ಗಿರಿಜಾ ದಿಲ್ಲಿವಾಲಾ, ಇಂದಿರಾ ಸಿಂಧೆ, ಸುಷ್ಮಾ ಗಾವಡೆ, ಶೋಭಾ ದಿಲ್ಲಿವಾಲಾ, ಶೈಲಜಾ ಮಾಕನೂರ ಇನ್ನಿತರರಿದ್ದರು.

## ಹಡಗಲಿಯಲ್ಲಿ ಅರಣ್ಯಕ್ಕೆ ಬೆಂಕಿ : ಬಂಧನ

ಹೂವಿನಹಡಗಲಿ, ಫೆ.19- ಹಡಗಲಿ ಪ್ರಾದೇಶಿಕ ಅರಣ್ಯ ವಲಯದ ತುಂಬಿನಕೇರಿ ಕಾಯ್ದಿಟ್ಟ ಅರಣ್ಯ ಪ್ರದೇಶದ ತುಂಬಿನಕೇರಿ ಸ.ನಂ. 176 ರಲ್ಲಿ ನಿರ್ಲಕ್ಷ್ಯತನದಿಂದ ಅರಣ್ಯಕ್ಕೆ ಬೆಂಕಿ ಹಾಕಿದ ಬಗ್ಗೆ ಅರಣ್ಯ ಮೊಕದ್ದಮೆ ದಾಖಲಾಗಿರುತ್ತದೆ. ಮೊಕದ್ದಮೆಯಲ್ಲಿ ಭಾಗಿಯಾದ ಆರೋಪಿತ ನಂ.1 ಮೋಟ್ಲಾನಾಯ್ಕ ತಂದೆ ತಿಪ್ಪಾನಾಯ್ಕ ತುಂಬಿನಕೇರಿ ಸಣ್ಣ ತಾಂಡಾ ಈತನನ್ನು ಬಂಧಿಸಲಾಗಿದೆ. ಆರೋಪಿತನಿಂದ ಮುಚ್ಚಳಿಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಕಾರ್ಯಾಚರಣೆಯಲ್ಲಿ ಕಿರಣ್‌ಕುಮಾರ್ ಕಲ್ಲಮ್ಮನವರ, ವಲಯ ಅರಣ್ಯಾಧಿಕಾರಿ ಹಡಗಲಿ ವಲಯ, ಡಿ.ವೈ. ಸಾಗರ್ ಉಪವಲಯ ಅರಣ್ಯಾಧಿಕಾರಿ, ಅರಣ್ಯ ರಕ್ಷಕ ದುಷ್ಯಂತಗೌಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು ಎಂದು ಪ್ರಾದೇಶಿಕ ಅರಣ್ಯ ವಲಯ ಅರಣ್ಯಾಧಿಕಾರಿ ಮನು ತಿಳಿಸಿದ್ದಾರೆ.


**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 ದಕ್ಷಿಣ 120 ಅಡಿ ರಸ್ತೆಗೆ, ಶಿವ ಪಾರ್ವತಿ ಬಡಾವಣೆಯಲ್ಲಿ 50x100 ಪೂರ್ವ ದಿಕ್ಕು
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಸೂರ್ಯ ನಮಸ್ಕಾರ, ಪ್ರಾಣಾಯಾಮ, ಧ್ಯಾನ, ಆಹಾರ ಪದ್ಧತಿ, ವ್ಯಕ್ತಿತ್ವ ವಿಕಸನ
**ಸಿದ್ಧ ಸಮಾಧಿ ಯೋಗ**
ದಾವಣಗೆರೆಯ ರಾಂ ಅಂಡ್ ಕೋ ವೃತ್ತದಲ್ಲಿನ ಶ್ರೀ ಗಣಪತಿ ದೇವಸ್ಥಾನದ ಮಹಡಿ ಮೇಲೆ ಸಿದ್ಧ ಸಮಾಧಿ ಯೋಗ ಉಚಿತ ಪರಿಚಯ ಕಾರ್ಯಕ್ರಮ ನಡೆಯಲಿದೆ. ಮಾಹಿತಿಗಾಗಿ ಸಂಪರ್ಕಿಸಿ:
94486 67523, 96633 44960, 99452 61777, 8660646442

**ಮನೆ ಮಾರಾಟಕ್ಕಿದೆ**
ಕುಂದುವಾಡ ಹೌಸಿಂಗ್ ಬೋರ್ಡ್ ಎರಡನೇ ಹಂತದ ತುಂಗಭದ್ರಾ ಬಡಾವಣೆಯಲ್ಲಿ ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸರಬರಾಜು ವ್ಯವಸ್ಥೆಯುಳ್ಳ ಸುಸಜ್ಜಿತ ಮನೆ ಸಂಖ್ಯೆ 3267, 'ಗೌತಮ್ ನಿಲಯ' ಆಸಕ್ತರು ಸಂಪರ್ಕಿಸಿ 94491 63356 ಅಥವಾ ಖುದ್ದಾಗಿ ಭೇಟಿ ನೀಡಿ. ಅಳತೆ 30×50 ಮೊದಲನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ. ಮನೆ

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಸ್ಟಾಫ್‌ಗಳು ಬೇಕಾಗಿದ್ದಾರೆ. ವಯಸ್ಸು : 18 ರಿಂದ 25, ಮಹಿಳೆಯರು ಬೇಕಾಗಿದ್ದಾರೆ. ಸಪ್ಲೈಯರ್, ಕ್ಲೀನರ್ ಕೆಲಸಕ್ಕೆ ಬೇಕಾಗಿದ್ದಾರೆ. (ಕೇಕ್ ಮಾಡಲು Helper ಬೇಕಾಗಿದ್ದಾರೆ) (ಮಹಿಳೆಯರು), ವಯಸ್ಸು : 18 ರಿಂದ 25, ಸ್ಥಳ : ಆಂಜನೇಯ ಬಡಾವಣೆ, ನೇತ್ರಾವತಿ ಹಾಸ್ಟೆಲ್ ರೋಡ್,
ಫೋ. : 93804 69079

**ಸೈಟ್ ಗಳು ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 ದಕ್ಷಿಣ, 40x60 ಪೂರ್ವ, 60x80 ಪೂರ್ವ, 30x50 ಪಶ್ಚಿಮ, 40x60 ಪಶ್ಚಿಮ, 30x50 ಉತ್ತರ, 30x40 ಉತ್ತರ, 30x50 ದಕ್ಷಿಣ ಇನ್ನೂ ಅನೇಕ
ಕಿರಣ್ ಬೂಸ್ನೂರ್ (ಏಜೆಂಟ್)
98440 63409

**ಸೈಟ್‌ಗಳು ಮಾರಾಟಕ್ಕಿವೆ**
ರಶ್ಮಿ ಹಾಸ್ಟೆಲ್ ಹತ್ತಿರ 30x40, 30x50, 30x60 ಪೂರ್ವ, ಪಶ್ಚಿಮ, ಕರ್ನಾಟಕ ಗೃಹಮಂಡಳಿಯಲ್ಲಿ KHB 30x50 ದಕ್ಷಿಣ
ಮಂಜುನಾಥ್, ಏಜೆಂಟ್
98444 91792

**ಮನೆ ಬಾಡಿಗೆಗಿದೆ**
ತರಳಬಾಳು ಬಡಾವಣೆ, ವಿದ್ಯಾನಗರ ಮುಖ್ಯರಸ್ತೆ 5ನೇ ಬಸ್‌ಸ್ಟಾಪ್ ಹತ್ತಿರದ 16ನೇ ಕ್ರಾಸ್‌ನಲ್ಲಿನ ಕಲ್ಲೇಶ್ವರ ಎಲೈಟ್‌ನಲ್ಲಿ 204, 206, 304 ಸಂಖ್ಯೆಯ 2BHK ಮನೆಗಳು ಬಾಡಿಗೆಗಿವೆ. ಸಂಪರ್ಕಿಸಿ :
98455-74143

ರಕ್ತದಾನ, ಶ್ರೇಷ್ಠದಾನ

**ಮನೆ/ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರದ ಪಕ್ಕ, ವಿನಾಯಕ ಬಡಾವಣೆಯಲ್ಲಿ 60x40 ಮನೆ. ವಿನಾಯಕ ಬಡಾವಣೆಯಲ್ಲಿ 40x50 ದಕ್ಷಿಣ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಮತ್ತು ರೂಂ ಬಾಡಿಗೆಗೆ**
ಫಸ್ಟ್ ಫ್ಲೋರ್‌ನಲ್ಲಿ 2 BHK, ಮುನ್ಸಿಪಲ್ ಮತ್ತು ಬೋರ್ ನೀರಿನ ವ್ಯವಸ್ಥೆ ಇರುವ ಮನೆ ಮತ್ತು ವಿದ್ಯಾರ್ಥಿಗಳಿಗೆ 1 ರೂಂ (#1926A/3) ತರಳಬಾಳು ಬಡಾವಣೆ (ವಿದ್ಯಾನಗರ), 1st ಬಸ್ ಸ್ಟಾಪ್, ಕಾಫಿ ಡೇ ಹಿಂಭಾಗ ಬಾಡಿಗೆಗಿದೆ. ಸಂಪರ್ಕಿಸಿ:
99019 03072

**ಮನೆ ಮಾರಾಟಕ್ಕೆ (ಇಂಡಿಪೆಂಡೆಂಟ್)**
ದಕ್ಷಿಣ 3BHK 40x60 M.C.C 'B' ಬ್ಲಾಕ್ ನಲ್ಲಿ
ಕಿರಣ್ ಬೂಸ್ನೂರ್ (ಏಜೆಂಟ್)
98440 63409
97315 63409
(ಮನೆ ಬಾಡಿಗೆಗೆ, ಲೀಸ್‌ಗೆ ಬೇಕೇ? ವಿಚಾರಿಸಿ)

**ಹೊಸ ಚೀಟಿ ಗುಂಪುಗಳು**
ಶ್ರೀ ಮಾರುತಿ ಚಿಟ್ ಫಂಡ್ಸ್ (ರಿ.)
ಕೆ.ಬಿ. ಬಡಾವಣೆ, ದಾವಣಗೆರೆ.
10,000x25=2,50,000/-
15,000x30=4,50,000/-
4000x25=1,00.000/-
7795149297, 9986122909

**ಮನೆ ಬಾಡಿಗೆ/ಲೀಜ್‌ಗೆ**
ಹದಡಿ ರಸ್ತೆಯಲ್ಲಿ ಬ್ಯಾಂಕ್, ಕಛೇರಿ, ಟಿ.ವಿ. ಸ್ಟೇಷನ್, ಜಿಲ್ಲಾ ಪಂಚಾಯತ್, ಹೈಟೆಕ್ ಹಾಸ್ಪಿಟಲ್, ಲಲಿತ್ ಶಾಲೆ, ಶಶಿ ಸೋಪ್ ಫ್ಯಾಕ್ಟರಿ, ಲೋಕಿಕೆರೆ ರಸ್ತೆ ಸುಬ್ರಮಣ್ಯ ದೇವಸ್ಥಾನ ಹತ್ತಿರವಿರುವ, ನೀರು 24x7, ಕಾರ್ ಪಾರ್ಕಿಂಗ್, ವಾಸ್ತುವಿರುವಂತಹ 2 BHK ಮನೆ ಬಾಡಿಗೆಗೆ/ಲೀಜ್‌ಗೆ ಇದೆ (ಹಿಂದೂಗಳಿಗೆ) ವಿಚಾರಿಸಿ
99004 11110

**ಪ್ರವಾಸ**
26 ಏಪ್ರಿಲ್ ದಾವಣಗೆರೆಯಿಂದ ಕಾಶಿ ಪ್ರವಾಸ ರೈಲು ಮತ್ತು ವಿಮಾನದಲ್ಲಿ ದೆಹಲಿ, ಆಗ್ರಾ, ಪ್ರಯಾಗರಾಜ, ಕಾಶಿ, ಅಯೋಧ್ಯ, ಹರಿದ್ವಾರ, ಹೃಷಿಕೇಶ್
ಗೀತಾ ಟ್ರಾವೆಲ್ಸ್, ದಾವಣಗೆರೆ
ಎಸ್.ಎ. ರಾಜು
94481 62499
99455 34966

**ಅಂಕಪಟ್ಟಿ ಕಳೆದಿದೆ**
ಕಾವ್ಯ ಟಿ D/o ತಿಮ್ಮೇಶಿ ಆದ ನಾನು ನನ್ನ ಡಿಪ್ಲೋಮಾ 1 ನೇ ಮತ್ತು 3ನೇ ಸೆಮಿಸ್ಟರ್ ಅಂಕಪಟ್ಟಿಯನ್ನು ದಿನಾಂಕ 2.02.2021 ರಂದು ಮನೆ ಬದಲಾಯಿಸುವ ವೇಳೆ 2014-2015 ನೇ ಸಾಲಿನಲ್ಲಿ ಉತ್ತೀರ್ಣವಾಗಿರುವ ಅಂಕಪಟ್ಟಿ ಕಳೆದುಕೊಂಡಿರುತ್ತೇನೆ ನೋಂದಣಿ ಸಂಖ್ಯೆ : 170EC 13020. ಸಿಕ್ಕವರು ಈ ಕೆಳಗಿನ ಮೊಬೈಲ್ ಸಂಖ್ಯೆಗೆ ತಿಳಿಸಲು ಕೋರಿದೆ. ಮೊಬೈಲ್ ಸಂಖ್ಯೆ
95352 17107

**ಖಾಲಿ ನಿವೇಶನ ಮಾರಾಟಕ್ಕಿದೆ**
ದಾವಣಗೆರೆ GMIT ಕಾಲೇಜು ಪಕ್ಕ 54x51 ಅಳತೆಯ (ಪೂರ್ವ) ಸೈಟ್ ನಂ.7 ಖಾಲಿ ನಿವೇಶನ ಮಾರಾಟಕ್ಕೆ.
ಸಂಪರ್ಕಿಸಿ:
98863 89487
97407 70640

**B.Sc CBZ Required to Maintain lab in Water Factory.**
Contact
89042 43165

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ**
ತಂದೂರಿ ರೋಟಿ, ತಂದೂರಿ ಚಿಕನ್ ಹಾಗೂ ಚೈನೀಸ್ ಐಟಮ್ಸ್ ಮಾಡಲು ಮತ್ತು ಹೋಟೆಲ್ ಕ್ಲೀನಿಂಗ್, ವೆಜಿಟೆಬಲ್ ಕಟ್ಟಿಂಗ್ ಹಾಗೂ ಸರ್ವೀಸ್ ಮಾಡಲು. ಎರಡು ವರ್ಷ ಅನುಭವವುಳ್ಳವರಿಗೆ ಪ್ರಥಮ ಆದ್ಯತೆ ಹಾಗೂ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ.
97433 94285, 78754 28456

**JOBS**
MCS ACADEMY
Training & Placement Cell
98444 92888

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಪಕ್ಕದಲ್ಲಿ (ಬಲ ಭಾಗ) 30x40 ದಕ್ಷಿಣ, 30x50 ಉತ್ತರ, 40x60 ಪೂರ್ವ(40 ಅಡಿ ರಸ್ತೆಗೆ), ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ನೌಕರರಿಗೆ ಆದ್ಯತೆ.
90198 88512, 99008 37087

**ಸ್ವಯಂ ಉದ್ಯೋಗಾವಕಾಶ**
ನ್ಯುರೋಥೆರಪಿ ಚಿಕಿತ್ಸೆ ಕಲಿಯಿರಿ ತಿಂಗಳಿಗೆ 30 ರಿಂದ 40 ಸಾವಿರ ಸಂಪಾದಿಸಿ.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
99726 00713

**ತಕ್ಷಣ ಬೇಕಾಗಿದ್ದಾರೆ**
ಗಾಡಿ ಹೋಟೆಲ್‌ಗೆ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 9 ರಿಂದ ಸಂಜೆ 5ರವರೆಗೆ ಸಂಪರ್ಕಿಸಿ:
99022 72893

**ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ಸುತ್ತ-ಮುತ್ತ ಸೆಕ್ಯೂರಿಟಿ ಗಾರ್ಡ್, ಗನ್ ಮ್ಯಾನ್, ಸೆಕ್ಯೂರಿಟಿ ಸೂಪರ್ ವೈಸರ್ ಕೆಲಸ ಮಾಡಲು ಬೇಕಾಗಿದ್ದಾರೆ. ESI + PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
70226 37701
72049 19232

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಗೋಡೌನ್ ಬಾಡಿಗೆಗೆ ಇದೆ**
35'x45' 15 HP ಕರೆಂಟ್‌ವುಳ್ಳ ಗೋಡೌನ್ ಬಾಡಿಗೆಗಿದೆ. ಬಂಬೂ ಬಜಾರ್, ಬಸವಾಪುರ ರೋಡ್, ದಾವಣಗೆರೆ.
94482 52703

**100% RESULT**
Tution for II PUC
Commerce
Accountancy
Business studies
Contact : 78997 99625

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಡಿಕೆ ತೋಟ ನೋಡಿಕೊಳ್ಳಲು ಕುಟುಂಬ ಬೇಕಾಗಿರುತ್ತದೆ. ಆಸಕ್ತರು ಸಂಪರ್ಕಿಸಿ
94482 37274
94484 39639

**ಬೇಕಾಗಿದ್ದಾರೆ**
ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಬಲ್ಲವರು ಡಿ.ಟಿ.ಪಿ.ಸೆಂಟರ್ ಗೆ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವಿ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ.
ಸಂಪರ್ಕಿಸಿ
94499 83365

**WANTED**
well experience in SOCIAL MEDIA MARKETING Field.
Attractive Salary.
Call: 90089 85112

**ಮಳಿಗೆ ಬಾಡಿಗೆಗಿದೆ**
KSRTC ಬಸ್ ಸ್ಟ್ಯಾಂಡ್ ರಸ್ತೆ, ಲೇಬರ್ ಕಾಲೋನಿ, ದಾವಣಗೆರೆ. ವಿಚಾರಿಸಿ
98441 54413

**VS Paramedical college**
SSLC ಪಾಸ್/PUC- ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ. SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
90195 80600
85532 78258

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**Room For Rent**
Single Room attached booth room 14x14 ft, 2nd floor, 4th Main, 9th cross, P.J. Extenstion Davanagere
94489 29509

**FAILED & REGULAR COACHING**
for SSLC & IInd PUC
PCMB, Commerce, Arts
SINCHANA ACADEMY
Near SBI ATM, Ram & co Circle, Davangere.
85532 78258 90195 80600

**ಡುಪ್ಲೆಕ್ಸ್ ಮನೆ ಬಾಡಿಗೆಗೆ ಇದೆ**
ಎಲ್ಲಾ ಆಧುನಿಕ ಸೌಲಭ್ಯವಿರುವ ಪೂರ್ವ ದಿಕ್ಕಿನ 4 BHK ಇಂಡಿಪೆಂಡೆಂಟ್ ಹೊಸ ಮನೆ M.C.C. 'B' ಬ್ಲಾಕ್
ಬಾಡಿಗೆ: 25 ಸಾವಿರ
ಅಡ್ವಾನ್ಸ್ 1 ಲಕ್ಷ
(ಬ್ರೋಕರ್‌ಗಳಿಗೆ ಅವಕಾಶವಿಲ್ಲ)
99023 83936, 82172 14069

**SHIKSHIT EDUCATION TRUST (R)**
Galaxy Higher Primary School
Wanted Teacher
Kannada: BA, B.Ed, Hindi : BA B.Ed,
Eng: B.Ed, D.Ed
Davaraj Urs Badavane 'C' Block opp Beeralingeshwar Kalyana Mantapa.
80732 26541, 90362 12686

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ,
H.O : Near coffee day nutana collage road, Vidyanagara 2nd main, Davangere
77603 16576
90080 55813

**ಬೇಕಾಗಿದ್ದಾರೆ**
ರಾತ್ರಿ ಪಾಳೆಯದಲ್ಲಿ ನೀರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
ಸಂಪರ್ಕಿಸಿ :
8660967207

**ಬೇಕಾಗಿದ್ದಾರೆ**
ರಚನಾ ಪವರ್ ಕಾಂ
4th Main, PJ Extn, Near Ram & co Circle UPS ಕಂಪನಿಯಲ್ಲಿ ರಿಸೆಪ್ಷನಿಸ್ಟ್ ಕೆಲಸಕ್ಕಾಗಿ ಯುವತಿಯರು ಬೇಕಾಗಿದ್ದಾರೆ. ಕಂಪ್ಯೂಟರ್ ನಾಲೆಡ್ಜ್ ಹೊಂದಿರಬೇಕು. ಭೇಟಿ ಸಮಯ ಬೆ.10 ರಿಂದ ಸಂಜೆ 6ರ ವರೆಗೆ
94498 35217

**ಸುವರ್ಣಾವಕಾಶ**
II PUC/PCMB/Commerce/Arts
ಫೇಲಾದ ವಿದ್ಯಾರ್ಥಿಗಳು ಲ್ಯಾಬ್ ಟೆಕ್ನೀಷಿಯನ್, ಹೆಲ್ತ್ ಇನ್ಸ್‌ಪೆಕ್ಟರ್, ಆಪರೇಷನ್ ಥಿಯೇಟರ್, ಎಕ್ಸ್-ರೇ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದು.
ಕಡೆಯ ದಿನಾಂಕ 25.02.2021
ವಿಜಯ ಪ್ಯಾರಾ ಮೆಡಿಕಲ್ ಕಾಲೇಜ್
ಡಿ.ಸಿ.ಎಂ. ಟೌನ್‌ಶಿಪ್, ದಾವಣಗೆರೆ.
77601 55550, 99454 22553

**Wanted Lady Teachers**
B.Sc B.Ed (PCM) 02 posts
B.Sc B.Ed (CBZ) 02 posts
BA B.Ed Eng - 02 posts
C.P.Ed/ B.P.Ed- 2 posts
Clerk B.Com with Computer knowledge - 2 posts
Attender - 2 posts, Bus Driver - 2 posts
S N Public School
Harihar & Davangere
7349397287 / 9741746205

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸಾಲ ಸೌಲಭ್ಯ**
ಐ.ಟಿ.ಆರ್. ಇಲ್ಲದೆ ಮನೆ ಕಟ್ಟಲು ಸಾಲ ಸೌಲಭ್ಯ ಸಣ್ಣ ಉದ್ದಿಮೆದಾರರಿಗೆ ಮತ್ತು ಕ್ಯಾಶ್ ಸ್ಯಾಲರಿ ಕಾರ್ಮಿಕರಿಗೂ. ಡೋರ್ ನಂಬರ್ ಇಲ್ಲದಿದ್ದರೂ ಆರ್.ಸಿ.ಸಿ. ಮನೆ ಕಟ್ಟಲು, ಮನೆ ಖರೀದಿಸಲು ಸಾಲ ಸೌಲಭ್ಯ. ಹಂಚಿನ ಮನೆ, ಶೀಟಿನ ಮನೆ ಮೇಲೆ ಸಾಲ ಸೌಲಭ್ಯ. ಪರ್ಸನಲ್ ಲೋನ್, ಬಿಜಿನೆಸ್ ಲೋನ್, ಕಾರ್ ಲೋನ್‌ಗಾಗಿ ಸಂಪರ್ಕಿಸಿ. ಮೊ:87227 11119

**ತಕ್ಷಣ ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೆಲಸ ಮಾಡಲು ಹೆಲ್ಪರ್ ಕೆಲಸಕ್ಕೆ ಬೇಕಾಗಿರುತ್ತಾರೆ. ವಸತಿ ಸೌಲಭ್ಯ ಇರುತ್ತದೆ. ಆಸಕ್ತರು ಸಂಪರ್ಕಿಸಿರಿ
79758 46679
94485 34147

**ಅಂಗಡಿಗೆ ಹುಡುಗರು ಬೇಕಾಗಿದ್ದಾರೆ**
SSLC Pass/Fail ಆದ ಹುಡುಗರು ಅಂಗಡಿಯಲ್ಲಿ ಕೆಲಸ ಮಾಡಲು 5 ಜನ ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 8 ರವರೆಗೆ.
ಸ್ಥಳ: ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ ಐಶ್ವರ್ಯ ಟವರ್, ಲಾಯರ್ ರಸ್ತೆ, ಟೈಯರ್ ಅಂಗಡಿ ಹತ್ತಿರ, ದಾವಣಗೆರೆ.

**ಬೇಕಾಗಿದ್ದಾರೆ**
1 ರಿಂದ 2 ವರ್ಷ ಅನುಭವವುಳ್ಳ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ ಜ್ಯೂನಿಯರ್ ಅಕೌಂಟೆಂಟ್ ಹುಡುಗ ಬೇಕಾಗಿದ್ದಾರೆ. ಸಂಪರ್ಕಿಸಿ:
ಆರಾಧ್ಯ ಕೆಮಿಕಲ್ಸ್ & ಫರ್ಟಿಲೈಜರ್
#115/1, ಹಳೇ ಪಿ.ಬಿ. ರಸ್ತೆ, ನಂದಿ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆ.
ಫೋ. : 87228 55609

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ಅಳತೆ :15x30. ವಿಚಾರಿಸಿ
89041 29928

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

# ಸಂಪ್ರದಾಯದ ತರಳಬಾಳು ಹುಣ್ಣಿಮೆ



ಸಿರಿಗೆರೆ, ಫೆ.19- ಹಿಂದಿನ ತರಳಬಾಳು ಹುಣ್ಣಿಮೆಯ ಸಂದರ್ಭದಲ್ಲಿ ಪ್ರಾರಂಭದ ದಿನದಲ್ಲಿ ಶಿವಧ್ವಜಾರೋಹಣ, ಡಾ.ಶಿವಮೂರ್ತಿ ಶಿವಾಚಾರ್ಯರು ಭಕ್ತರೊಂದಿಗೆ ಮುಖ್ಯ ರಸ್ತೆಗಳಲ್ಲಿ ಪಾದಯಾತ್ರೆ ಮಾಡುತ್ತಿದ್ದರು. ನಂತರ ಸಂಜೆ ಧ್ವಜಾರೋಹಣ, ಉದ್ಘಾಟನೆ, ಸಭಾ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ತರಳ ಬಾಳು ಹುಣ್ಣಿಮೆ ಎಂದರೆ ಅದೊಂದು ನಾಡಹಬ್ಬವಾಗಿ ಪರಿಣಮಿಸಿ ಆಯೋಜಿತ ಸ್ಥಳ ತಳಿರು, ತೋರಣಗಳಿಂದ ಸಭಾ ಮಂಟಪ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿತ್ತು. ಅಲ್ಲದೆ ಈ ಕಾರ್ಯಕ್ರಮಕ್ಕಾಗಿಯೇ ದೂರದ ಸ್ಥಳಗಳಿಂದ ಬಹುಸಂಖ್ಯೆಯ ಭಕ್ತರು ಬಂದು ಸೇರುತ್ತಿದ್ದರು. ಆದರೆ ಈ ವರ್ಷ ಕೊರೊನಾ ಕಾರಣದಿಂದಾಗಿ ಇದಾವುದೂ ಇಲ್ಲದೇ ಮಠದಲ್ಲಿ ಕೇವಲ ಸರಳವಾಗಿ ಸಂಪ್ರದಾಯದ ಪ್ರಕಾರ ನಡೆಯುತ್ತಿರುವುದು ಕಂಡುಬಂದಿದೆ.

ತರಳಬಾಳು ಬೃಹನ್ಮಠದಲ್ಲಿ ಶುಕ್ರವಾರದಿಂದ ಅಂತರ್ಜಾಲ ಪ್ರಸಾರದ ಮೂಲಕ ತರಳಬಾಳು ಹುಣ್ಣಿಮೆಯು ಸರಳವಾಗಿ ಸಂಜೆ ಆರಂಭಗೊಂಡಿತು. ಇದರ ಪ್ರಯುಕ್ತವಾಗಿ ಬೆಳಿಗ್ಗೆ ಶಾಲಾ- ಕಾಲೇಜು ವಿದ್ಯಾರ್ಥಿಗಳ ಹಾಗೂ ಶಿಕ್ಷಕರಿಂದ ಶಿವಮಂತ್ರ ಲೇಖನ, ವಚನ ಪ್ರಾರ್ಥನೆ, ಗುರುಶಾಂತರಾಜ ದೇಶಿಕೇಂದ್ರ ಸ್ವಾಮೀಜಿ ಪ್ರತಿಮೆಗೆ ಹಾಗೂ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ ಕಂಚಿನ ಪ್ರತಿಮೆಗೆ ಬೃಹನ್ಮಠದ ವಟುಗಳಿಂದ ಪೂಜೆ ನಡೆಯಿತು.

ಸಂಜೆ ಅಂತರ್ಜಾಲ ಕಾರ್ಯಕ್ರಮ ಪ್ರಾರಂಭಗೊಂಡಿತು. ಅಂತರ್ಜಾಲ ವೀಕ್ಷಣೆಗಾಗಿ ಇಲ್ಲಿನ ಐಕ್ಯಮಂಟಪದಲ್ಲಿ ಎಲ್ಇಡಿ ಪರದೆ ಅಳವಡಿಸಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು.

ಅಂತರ್ಜಾಲದಲ್ಲಿ ತರಳಬಾಳು ಹುಣ್ಣಿಮೆಯ ಸಿಂಹಾವಲೋಕನ ಸಂದರ್ಭದಲ್ಲಿ 1965 ಚಿತ್ರದುರ್ಗ, 2000 ಶಿವಮೊಗ್ಗ, 2002 ಹರಿಹರ, 2003 ಚಿಕ್ಕಮಗಳೂರು, 2014 ಶಿಗ್ಗಾಂವ್‌ಗಳಲ್ಲಿ ನಡೆದ ಹುಣ್ಣಿಮೆಯ ಮಹೋತ್ಸವದ ಸಭಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಿತ್ತರಿಸಲಾಯಿತು.


**ಶಿಗ್ಗಾಂವ ಹುಣ್ಣಿಮೆ ಸ್ಮರಣೆ :** 2014 ರಲ್ಲಿ ಶಿಗ್ಗಾಂವ್‌ನಲ್ಲಿ ನಡೆದ ಹುಣ್ಣಿಮೆಯ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಆಶೀರ್ವಚನ ಬಿತ್ತರಿಸಲಾಯಿತು. ಈ ಆಶೀರ್ವಚನದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿ ಮಹಿಳೆ ಕೌಟುಂಬಿಕ ಜೀವನದಲ್ಲಿ ಹೆಣ್ಣು-ಗಂಡು ಬೇಧಬಾವ ಇಲ್ಲದೆ ಮಕ್ಕಳನ್ನು ಸಾಕುವ ಜವಾಬ್ದಾರಿ ಹೊಂದಬೇಕೆಂದು ಹಾಗೂ ಪುರುಷರು ಮಹಿಳೆಯರ ಮೇಲೆ ಒತ್ತಡ ಹೇರದೆ ಮಕ್ಕಳ ಬಗ್ಗೆ ಸಮಾನ ಅವಕಾಶ ಕಲ್ಪಿಸಿ ಬೆಳೆಸಬೇಕೆಂದರು. ಮಹಿಳೆಗೆ ದೇಶದಲ್ಲಿ ಗೌರವ ಹೆಚ್ಚು ಸಿಗುವಂತಾಗಲಿ ಎಂದರು.

ಈ ವೇಳೆ ಸರ್ಕಾರದ ಜಾಹೀರಾತಿನಲ್ಲಿ ಕೀರ್ತಿಗೊಬ್ಬ ಮಗ, ಆರತಿಗೊಬ್ಬ ಮಗಳು ಎಂದು ಇತ್ತು. ಆದರೆ ಸರ್ಕಾರ ಇನ್ನುಮುಂದೆ ಆಸ್ತಿಗೊಬ್ಬ ಮಗ ಆಸರೆಗೊಬ್ಬ ಮಗಳು ಇರಬೇಕೆಂದು ಮಂಡನೆ ಮಾಡಲಿ ಎಂದು ಸರ್ಕಾರದ ಪ್ರತಿನಿಧಿಗಳಿಗೆ ಕಿವಿಮಾತು ಹೇಳಿದ ವಿಚಾರ ಅಂತರ್ಜಾಲದಲ್ಲಿ ಗಮನ ಸೆಳೆಯಿತು.

ಅಲ್ಲದೆ ವಿಭೂತಿ ಪುರುಷರು ವಜ್ರಕ್ಕಿಂತಲೂ ಕಠಿಣ, ಹೂವಿಗಿಂತಲೂ ಕೋಮಲ, ಕಾಠಿಣ್ಯ ಮತ್ತು ಕೋಮಲತೆ ಇವೆರಡೂ ವಿರುದ್ಧ ಪದಗಳು. ಒಂದೇ ಕಾಲದಲ್ಲಿ ಇವೆರಡೂ ಇರಲು ಸಾಧ್ಯವಿಲ್ಲ. ಆದರೆ ನಮ್ಮ ಹಿರಿಯ ಗುರುಗಳಲ್ಲಿ ಈ ಎರಡೂ ಗುಣಗಳನ್ನು ಕಂಡಿದ್ದೆವು. ಅವರು ಎಷ್ಟು ಕಠೋರರವೋ ಅಷ್ಟೇ ಕೋಮಲ ಸ್ವಭಾವವುಳ್ಳವರು ಎಂದು ಸ್ಮರಿಸಿದ್ದು ಅಂತರ್ಜಾಲದಲ್ಲಿ ಬಿತ್ತರಗೊಂಡಿತು.



# ಶಿವಾಜಿ ಆತ್ಮವಿಶ್ವಾಸದ ಪ್ರತೀಕ : ಬಸವಪ್ರಭು ಶ್ರೀ



## ಶಿವಾಜಿ ಮಹಾರಾಜರ 394ನೇ ಜಯಂತ್ಯುತ್ಸವ

ದಾವಣಗೆರೆ, ಫೆ.19- ಛತ್ರಪತಿ ಶಿವಾಜಿ ಮಹಾರಾಜರು ಪ್ರತಿಯೊಬ್ಬ ರಿಗೂ ಸ್ಪೂರ್ತಿ, ಆತ್ಮವಿಶ್ವಾಸದ ಪ್ರತೀಕ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಅಂಬಾಭವಾನಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಹಮ್ಮಿಕೊಳ್ಳ ಲಾಗಿದ್ದ ಶ್ರೀ ಶಿವಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ, ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಶಿವಾಜಿಯನ್ನು ನೆನೆದರೆ ಭಯ ದೂರವಾಗುತ್ತದೆ. ಧೈರ್ಯ ಗಟ್ಟಿತನ ಬರುತ್ತದೆ. ಕೃಷಿಯಲ್ಲಿ ನಷ್ಟ ಅನುಭವಿಸಿದ ರೈತರು, ಹೆಚ್ಚು ಅಂಕ ಪಡೆಯಲಿಲ್ಲ ಎಂದು ವಿದ್ಯಾರ್ಥಿಗಳು, ಕೌಟುಂಬಿಕ ಕಲಹಗಳಿಂದಾಗಿ ಕೆಲವರು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಾರೆ. ಇವರೆಲ್ಲಾ ಶಿವಾಜಿ ಸ್ಮರಣೆ ಮಾಡಿ, ಧೈರ್ಯ ತಂದುಕೊಂಡು ಬದುಕಿನ ಕಷ್ಟಗಳನ್ನು ಗೆಲ್ಲಬಹುದಾಗಿದೆ ಎಂದರು.

ಬದುಕಿನ ಸವಾಲುಗಳನ್ನು ಗೆಲ್ಲಲು ಶಿವಾಜಿ ಮಹಾರಾಜರನ್ನು ಸ್ಪೂರ್ತಿಯಾಗಿ ಸ್ವೀಕರಿಸಬೇಕು. ಭಾರತ ಕಂಡ ಪರಾಕ್ರಮಿ, ಧೀರ, ಶೂರ ಎಂದರೆ ಶಿವಾಜಿ ಎಂದು ಬಣ್ಣಿಸಿದ ಸ್ವಾಮೀಜಿ, ಕೇವಲ ಒಂದು ಜನಾಂಗಕ್ಕೆ ಶಿವಾಜಿ ಸೀಮಿತವಾಗಿಲ್ಲ ಎಂದರು.

ಶಿವಾಜಿ ತಾಯಿ ಜೀಜಾಬಾಯಿ ಮಗನಿಗೆ ಉತ್ತಮ ಶಿಕ್ಷಣ, ಸಂಸ್ಕಾರ, ಸ್ವರಾಜ್ಯದ ಪರಿಕಲ್ಪನೆ, ಧೈರ್ಯ, ದೇಶಪ್ರೇಮ, ಆತ್ಮವಿಶ್ವಾಸವನ್ನು ತುಂಬಿದ್ದರ ಫಲವಾಗಿ ಶಿವಾಜಿ ಮರಾಠಾ ಸಾಮ್ರಾಜ್ಯ ಕಟ್ಟಲು ಸಾಧ್ಯವಾಯಿತು ಎಂದರು.

**ಮರಾಠ ನಿಗಮ ವಿರೋಧಕ್ಕೆ ಅರ್ಥವಿಲ್ಲ:** ಇತ್ತೀಚೆಗೆ ಸರ್ಕಾರ ಮರಾಠ ಜನಾಂಗದ ಅಭಿವೃದ್ಧಿಗಾಗಿ ಮರಾಠ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಮುಂದಾಗಿದೆ. ಆದರೆ ಕೆಲವರು ಇದನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ಗಡಿಭಾಗದ ಬೆಳಗಾವಿಯಲ್ಲಿ ಕೆಲ ಮರಾಠಿಗರ ಗಲಾಟೆ ಮಾಡಬಹುದು. ಆದರೆ ಮಧ್ಯಕರ್ನಾಟಕದಲ್ಲಿ ಯಾವುದೇ ಗಲಾಟೆಗಳಿಲ್ಲ. ಕರ್ನಾಟಕದಲ್ಲಿರುವ ಮರಾಠಿಗರು ಅಪ್ಪಟ ಕನ್ನಡಿಗರೇ ಆಗಿದ್ದಾರೆ. ಸಮುದಾಯದ ಅಭಿವೃದ್ಧಿಗೆ ಪ್ರಾಧಿಕಾರ ರಚನೆ ಉತ್ತಮ ತೀರ್ಮಾನ ಎಂದರು.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮಾತನಾಡಿ, ಶಿವಾಜಿ ಕೇವಲ ವ್ಯಕ್ತಿಯಲ್ಲ ಶಕ್ತಿ ಎಂದು ಹೇಳಿದರು.

ಧೀರನಾದರೂ ಶಿವಾಜಿಯಲ್ಲಿ ಕರುಣೆ ಇತ್ತು, ಮಾತೃ ಹೃದಯಿಯಾಗಿದ್ದರು. ಪರಸ್ತ್ರೀಯರನ್ನು ಗೌರವಿಸುತ್ತಿದ್ದರು. ಅವರನ್ನು ನೆನೆದರೆ ಹೇಡಿತನ ದೂರವಾಗುತ್ತದೆ. ಸಹೋದರತ್ವ ಮೈಗೂಡುತ್ತದೆ. ಅವರನ್ನು ಕೇವಲ ಜಾತಿ ಹಾಗೂ ಒಂದು ಸಮಾಜಕ್ಕೆ ಸೀಮಿತಗೊಳಿಸಬಾರದು.

ಅವರೊಬ್ಬ ಹಿಂದೂ ಎಂದು ಹೇಳಿದರು. ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಶಿವಾಜಿ ಜಯಂತಿಯನ್ನು ಸರಳವಾಗಿ ಆಚರಿಸಲಾಗಿದ್ದು, ಮುಂದಿನ ವರ್ಷ ಅದ್ದೂರಿಯಾಗಿ ಆಚರಿಸಲಾಗುವುದು ಎಂದರು. ಶಿವಮೊಗ್ಗದ ಎಮ್ಮೆಹಟ್ಟಿ ಗ್ರಾ.ಪಂ. ಪಿಡಿಓ ಶಿವಾಜಿ ಡಿಸ್ಲೆ ಅವರು ಶಿವಾಜಿ ಕುರಿತು ಉಪನ್ಯಾಸ ನೀಡಿದರು.

ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಅಜ್ಜಪ್ಪ ಪವಾರ್, ಖಜಾಂಚಿ ಎಂ.ಗೋಪಾಲರಾವ್ ಮಾನೆ, ಕಾರ್ಯದರ್ಶಿ ಜಿ.ಯಲ್ಲಪ್ಪ ಢಮಾಳೆ, ಶಹಾಜಿ ಮಹಾರಾಜ ಭೋಸ್ಲೆ ಅಭಿವೃದ್ಧಿ ಸ್ಮಾರಕ ಸಮಿತಿ ಅಧ್ಯಕ್ಷ ವೈ.ಮಲ್ಲೇಶ್, ಶ್ರೀ ಜೀಜಾಮಾತ ಮಹಿಳಾ ಮಂಡಳಿ ಅಧ್ಯಕ್ಷೆ ಕುಮಾರಿ ಗೌರಬಾಯಿ ಮೋಹಿತೆ, ಉಪಾಧ್ಯಕ್ಷೆ ಅನುಸೂಯಬಾಯಿ ಜಾಧವ್, ಕಾರ್ಯದರ್ಶಿ ಪದ್ಮಬಾಯಿ ಜಾಧವ್, ಜಯಣ್ಣ ಜಾಧವ್, ಹನುಮಂತರಾವ್ ಸಾಳಂಕಿ ಇತರರು ಉಪಸ್ಥಿತರಿದ್ದರು.

ಚಂದನ್ ಮೋಹಿತ್ ಪ್ರಾರ್ಥಿಸಿದರು. ಅರುಣ್ ಕುಮಾರ್ ಮಾನೆ ಸ್ವಾಗತಿಸಿದರು. ಅಪೂರ್ವ ಎನ್.ಮೋರೆ ಭರತನಾಟ್ಯ ಪ್ರಸ್ತುತ ಪಡಿಸಿದರೆ, ಶ್ರಾವಣ, ಅಮೃತ ನೃತ್ಯ ಪ್ರದರ್ಶಿಸಿದರು.

### ಪ್ರಾಧಿಕಾರ ವಿರೋಧ ಬಿಡಿ: ಜಾಧವ್

ದಾವಣಗೆರೆ, ಫೆ.19- ಮರಾಠ ಅಭಿವೃದ್ಧಿ ಪ್ರಾಧಿಕಾರ ವಿರೋಧಿಸು ತ್ತಿರುವ ಕನ್ನಡ ಪರ ಹೋರಾಟ ಗಾರರು ತಮ್ಮ ಉದ್ಧಟತನ ಮುಂದು ವರೆಸಿದರೆ, ಪ್ರತಿಯಾಗಿ ಕನ್ನಡ ಮರಾಠರು ರಾಜ್ಯಾದ್ಯಂತ ನಿಮ್ಮ ವಿರುದ್ಧ ಹೋರಾಟ ಮಾಡಬೇಕಾಗು ತ್ತದೆ ಎಂದು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಗೌರವಾ ಧ್ಯಕ್ಷ ಯಶವಂತರಾವ್ ಜಾಧವ್ ಎಚ್ಚರಿಸಿದರು. ಶ್ರೀ ಶಿವಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹಿಂದುಳಿದ ಮರಾಠರ ಅಭಿವೃದ್ಧಿಗಾಗಿ ಸರ್ಕಾರ ಪ್ರಾಧಿಕಾರ ರಚಿಸಲು ಮುಂದಾಗಿದೆ. ಆದರೆ ಕನ್ನಡ ಪರ ಸಂಘಟನೆಗಳು ಇದನ್ನು ವಿರೋಧಿಸುತ್ತಿವೆ. ನಾವೇನು ಪಾಪ ಮಾಡಿದ್ದೇವೆ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿನ ಶೇ.90ರಷ್ಟು ಮರಾಠರಿಗೆ ಮರಾಠಿ ಭಾಷೆ ತಿಳಿದಿಲ್ಲ. ನಾವೆಲ್ಲಾ ಅಪ್ಪಟ ಕನ್ನಡಿಗರು. ಇಲ್ಲಿಯೇ ಹುಟ್ಟಿ, ಇಲ್ಲಿಯೇ ಜೀವನ ಕಳೆಯುವವರು. ಬೆಳಗಾವಿಯಲ್ಲಿ ಯಾರೋ ಕೆಲವರು ಇಲ್ಲಿನ ಮರಾಠಿಗರು ಮಹಾರಾಷ್ಟ್ರದವರು ಎಂದ ಮಾತ್ರಕ್ಕೆ ಕರ್ನಾಟಕದ ಮರಾಠರನ್ನು ದೂರುವುದು ಸರಿಯಲ್ಲ ಎಂದರು.

ಭಾರತ ಹಿಂದೂಗಳ ದೇಶವಾಗಿ ಉಳಿದಿದೆ ಎಂದರೆ ಅದಕ್ಕೆ ಶಿವಾಜಿ ಮಹಾರಾಜರೇ ಕಾರಣ. ಶಾಹಿಗಳು ಹಿಂದೂಗಳ ಮೇಲೆ ದೌರ್ಜನ್ಯ ನಡೆಸುತ್ತಾ, ಹಿಂದೂ ದೇವಾಲಯಗಳನ್ನು ಧ್ವಂಸ ಮಾಡುತ್ತಾ, ಹಿಂದೂ ಮಹಿಳೆಯರ ಮಾನಾಪಹರಣ ಮಾಡುವಾಗ ಅವರ ವಿರುದ್ಧ ಹೋರಾಡಿ ಹಿಂದೂ ಸಾಮ್ರಾಜ್ಯ ಸ್ಥಾಪಿಸಿದ ಶಿವಾಜಿ ಕೇವಲ ಮರಾಠಿಗರಿಗೆ ಸೀಮಿತವಲ್ಲ ಎಂದು ಜಾಧವ್ ಹೇಳಿದರು.

# ಜಿಪಂ ಸಿಇಓ ಆಗಿ ವಿಜಯ ಮಹಾಂತೇಶ್ ಅಧಿಕಾರ ಸ್ವೀಕಾರ



ದಾವಣಗೆರೆ, ಫೆ.19- ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಡಾ. ವಿಜಯ ಮಹಾಂತೇಶ್ ಬಿ. ದಾನಮ್ಮನವರ್ ಗುರುವಾರ ಅಧಿಕಾರ ಸ್ವೀಕರಿಸಿದ್ದಾರೆ.

ಜಿ.ಪಂ ಸಿಇಓ ಆಗಿದ್ದ ಪದ್ಮಾ ಬಸವಂತಪ್ಪ ಅವರನ್ನು ಸರ್ಕಾರ ಬೇರೆಡೆಗೆ ವರ್ಗಾವಣೆಗೊಳಿಸಿದ್ದು, ಅವರಿಗೆ ಇನ್ನು ಹುದ್ದೆ ತೋರಿಸಬೇಕಿದೆ.

ವಿಜಯ ಮಹಾಂತೇಶ್ ಅವರು, ಗದಗ ಜಿಲ್ಲೆಯ ಶಿರಹಟ್ಟಿಯವರು. ಹಾವೇರಿಯಲ್ಲಿ ಪ್ರಾಥಮಿಕ, ವಿಜಯಪುರದಲ್ಲಿ ದ್ವಿತೀಯ ಪಿಯುವರೆಗೆ ವಿದ್ಯಾಭ್ಯಾಸ ಮಾಡಿದ್ದ ಅವರು, ಬಳಿಕ ಪಶು ವೈದ್ಯಕೀಯ ವಿಜ್ಞಾನದಲ್ಲಿ ಪದವಿ ಪಡೆದಿದ್ದರು. 2004-06ನೇ ಬ್ಯಾಚ್‌ನಲ್ಲಿ ಕೆಎಎಸ್ ಉತ್ತೀರ್ಣರಾಗಿದ್ದ ಅವರು ದೆಹಲಿಯಲ್ಲಿ ಒಂದು ವರ್ಷ ಇಂಡಿಯನ್ ಇನ್‌ಫರ್ಮೇಶನ್ ಸರ್ವಿಸ್‌ನಲ್ಲಿ ಕಾರ್ಯ ನಿರ್ವಹಿಸಿದ್ದರು. ಅಫಜಲಪುರ ತಾಪಂ ಇಓ ಆಗಿ ಕಾರವಾರ, ಬೆಳಗಾವಿಯಲ್ಲಿ ಉಪವಿಭಾಗಾಧಿಕಾರಿಯಾಗಿ, ಹೆಸ್ಕಾಂ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದ ಅವರು ಉತ್ತರ ಕನ್ನಡ, ಬಳ್ಳಾರಿ ಮತ್ತಿತರೆ ಕಡೆಗಳಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಬಳಿಕ ರಾಜ್ಯ ಶಿಷ್ಟಾಚಾರ ಇಲಾಖೆಯಲ್ಲಿ ಕೆಲಸ ಮಾಡಿದ ಅವರು ಯಡಿಯೂರಪ್ಪ ನೇತೃತ್ವದ ಸರ್ಕಾರ ಬಂದ ಬಳಿಕ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದರು. ಇದೀಗ ದಾವಣಗೆರೆ ಜಿಪಂ ಸಿಇಓ ಆಗಿ ವರ್ಗಾವಣೆಗೊಂಡು ಅಧಿಕಾರ ವಹಿಸಿಕೊಂಡಿದ್ದಾರೆ.

# ನಗರದಲ್ಲಿ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ

ಜಿಲ್ಲೆ ಸಮಾಚಾರ ದಿನಪತ್ರಿಕೆ ಬಳಗ ಸಾದರಪಡಿಸುವ 2020ರ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ ಸಮಾರಂಭ ಇಂದು ಸಂಜೆ 6 ಗಂಟೆಗೆ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ಜರುಗಲಿದೆ.


ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್ ಅವರು ಪ್ರಶಸ್ತಿ ಪುರಸ್ಕೃತರಾಗಿರುತ್ತಾರೆ. ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಐರಣಿ ಬಸವರಾಜ್ ಅವರಿಗೆ ಅಭಿನಂದನೆ ಸಲ್ಲಿಸಲಾಗುವುದು.

ಕಾರ್ಯಕ್ರಮವನ್ನು ನ್ಯಾ. ಎಚ್. ಎನ್. ನಾಗಮೋಹನದಾಸ್ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡುವರು. ದಾವಣಗೆರೆ ವಿವಿ ಕುಲಪತಿಗಳಾದ ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಮಹಾಂತೇಶ ಬೀಳಗಿ, ಬಿ. ವಾಮದೇವಪ್ಪ, ಶ್ರೀಮತಿ ಜಸ್ಟಿನ್ ಡಿಸೌಜ ಆಗಮಿಸುವರು. ಕಾರ್ಯಕ್ರಮದಲ್ಲಿ ಎನ್.ಟಿ. ಎರ್ರಿಸ್ವಾಮಿ, ಡಾ. ಈಶ್ವರ ಶರ್ಮ, ವಿ. ಹನುಮಂತಪ್ಪ ಉಪಸ್ಥಿತರಿರುವರು.

# ಪಂಚಮಸಾಲಿ ಸಮಾವೇಶಕ್ಕೆ ಹೊನ್ನಾಳಿಯಿಂದ 5 ಬಸ್ಸು

ಹೊನ್ನಾಳಿ, ಫೆ.19 - ಬೆಂಗಳೂರಿನಲ್ಲಿ ನಡೆಯುತ್ತಿರುವ ಪಂಚಮಸಾಲಿ 2ಎ ಮೀಸಲಾತಿ ಹೋರಾಟವನ್ನು ಬೆಂಬಲಿಸಿ ಹೊನ್ನಾಳಿಯಿಂದ 5 ಬಸ್ಸುಗಳಲ್ಲಿ ಸಮಾಜ ಬಾಂಧವರ ಸಹಕಾರದೊಂದಿಗೆ ಶನಿವಾರ ರಾತ್ರಿ 8 ಗಂಟೆಗೆ ಪೇಟೆ ಮಾರಿಕಾಂಬ ದೇವಸ್ಥಾನದಿಂದ ತೆರಳುತ್ತಿರುವುದಾಗಿ ಪಟ್ಟಣದ ಪಂಚಮಸಾಲಿ ಯುವ ಘಟಕದ ಅಧ್ಯಕ್ಷ ಹೋಟೆಲ್ ಗಿರೀಶ್ ತಿಳಿಸಿದ್ದಾರೆ.

# ಮಲೇಬೆನ್ನೂರು ಪುರಸಭೆಗೆ ನೇಮಕ



ಮಲೇಬೆನ್ನೂರು, ಫೆ.19- ಪಟ್ಟಣದ ಬಿಜೆಪಿ ಕಾರ್ಯಕರ್ತರಾದ ಪಿ.ಆರ್. ರಾಜು, ಜಿ.ಹೆಚ್ ಮಂಜಪ್ಪ, ಟಿ. ವಾಸಪ್ಪ, ಎ.ಕೆ. ಲೋಕೇಶ್ ಮತ್ತು ಶ್ರೀಮತಿ ಸುಮ ವೈ.ಪಿ ಪರಮೇಶ್ವರಪ್ಪ ಅವರನ್ನು ಇಲ್ಲಿನ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರ ನಾಮ ನಿರ್ದೇಶನ ಮಾಡಿ ಗುರುವಾರ ಆದೇಶ ಹೊರಡಿಸಿದೆ. ಸಂಸದ ಜಿ.ಎಂ.ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ ಸದಸ್ಯ ಬಿ.ಎಂ ವಾಗೀಶ್‌ಸ್ವಾಮಿ ಅವರ ಶಿಫಾರಸ್ಸಿನ ಮೇರಗೆ ಈ ನೇಮಕ ಮಾಡಲಾಗಿದೆ.

# ಪತಿಯಿಂದಲೇ ಪತ್ನಿಯ ಬರ್ಬರ ಕೊಲೆ

**ಹರಿಹರ : ಆರೋಪಿಯ ಬಂಧನ**

ಹರಿಹರ, ಫೆ.19- ನಗರದ ಅಮರಾವತಿ ಮಲ್ಲಿಕಾರ್ಜುನ ಬಡಾವಣೆಯಲ್ಲಿ ಗಂಡನೇ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ನಡೆದಿದೆ.

ಇಲ್ಲಿನ ನಿವಾಸಿ ಮರಿಯಪ್ಪ ತನ್ನ ಪತ್ನಿ ಸೌಭಾಗ್ಯಳನ್ನು (52) ಶುಕ್ರವಾರ ಬೆಳಿಗ್ಗೆ 11.30 ರ ಸಮಯದಲ್ಲಿ ಚಾಕು, ಕೊಡಲಿಯಿಂದ ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಗಂಡ ಮರಿಯಪ್ಪ ಪತ್ನಿ ಸೌಭಾಗ್ಯಳನ್ನು ಕುಡಿದು ಸಣ್ಣಪುಟ್ಟ ಮಾತಿಗೆ ಜಗಳ ಮಾಡಿ ಹೊಡೆಯುತ್ತಿದ್ದನು. ಇಂದು ಸಹ ಕುಡಿದು ಜಗಳ ವಿಕೋಪಕ್ಕೇರಿ ಚಾಕು, ಕೊಡಲಿಯಿಂದ ಕುತ್ತಿಗೆ ಹಾಗೂ ಹೊಟ್ಟೆಗೆ ಇರಿದು ಬರ್ಬರವಾಗಿ ಕೊಲೆ ಮಾಡಿದ್ದಾನೆ. ಸೌಭಾಗ್ಯಗೆ 4 ಗಂಡು ಮಕ್ಕಳಿದ್ದು, ಮಕ್ಕಳ ರೋದನ ಮುಗಿಲು ಮುಟ್ಟಿತ್ತು.

ಘಟನೆ ನಡೆದ ಸ್ಥಳಕ್ಕೆ ಸಿಪಿಐ, ಗ್ರಾಮಾಂತರ ಪಿಎಸ್ಐ ರವಿಕುಮಾರ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಆರೋಪಿಯನ್ನು ವಶಕ್ಕೆ ಪಡೆದು ಪ್ರಕರಣವನ್ನು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿದ್ದಾರೆ.

# ಬಜೆಟ್ ಇತಿಮಿತಿಯೊಳಗೆ ಅಗತ್ಯ ಯೋಜನೆಗಳಿಗೆ ಒತ್ತು

## ಮಲೇಬೆನ್ನೂರು ಪುರಸಭೆಯ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಾಧಿಕಾರಿ ಉದಯಕುಮಾರ್



ಮಲೇಬೆನ್ನೂರು, ಫೆ.19- ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ 2021-22 ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಾರ್ವಜನಿಕರ ಸಮಾಲೋಚನಾ ಸಭೆಯನ್ನು ಪುರಸಭೆ ಅಧ್ಯಕ್ಷೆ ನಾಹೀದ ಅಂಜುಂ ಸೈಯದ್ ಇಸ್ರಾರ್ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಪುರಸಭೆ ಸದಸ್ಯರು, ಸಾರ್ವಜನಿಕರು ಮತ್ತು ಪತ್ರಕರ್ತರು ಪಟ್ಟಣದಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸಗಳನ್ನು ಬಜೆಟ್‌ನಲ್ಲಿ ಸೇರಿಸಿ, ಅನುಷ್ಠಾನಗೊಳಿಸುವಂತೆ ಒತ್ತಾಯಿಸಿದರು.

ಪುರಸಭೆ ಸದಸ್ಯ ಬಿ. ಸುರೇಶ್ ಮಾತನಾಡಿ, ಬಜೆಟ್ ಸದಸ್ಯರ ಸಮ್ಮುಖದಲ್ಲಿ ಆಗಿಲ್ಲ. ಬಜೆಟ್ ಕುರಿತು ನಮಗೆ ಮಾಹಿತಿ ನೀಡಬೇಕು. ಬಜೆಟ್ ಅನ್ನು ಸಾಮಾನ್ಯ ಸಭೆಯ ನಂತರ ಮಂಡಿಸುವುದು ಸೂಕ್ತ ಎಂದರು. ಇದುವರೆಗೂ ಸಾಮಾನ್ಯ ಸಭೆ ಕರೆದಿಲ್ಲ. ಜೊತೆಗೆ ಸಭೆಯ ಬಗ್ಗೆ ಪ್ರಚಾರ ಮಾಡಿಲ್ಲ. ಪ್ರಚಾರ ಮಾಡಿ, ಸಭೆ ನಡೆಸಿರಿ ಎಂದು ಸುರೇಶ್ ದೂರಿದರು.

ಕಣ್ಣಾಳ್ ಹನುಮಂತಪ್ಪ ಮಾತನಾಡಿ ಬಾಪೂಜಿ ಹಾಲ್ ಪುನರ್ ನಿರ್ಮಾಣಕ್ಕೆ ಗಮನ ಹರಿಸದಿದ್ದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪಾದಯಾತ್ರೆ ಮಾಡುವುದಾಗಿ ಎಚ್ಚರಿಕೆ ನೀಡಿದರು. ಜಿಗಳಿ ವೃತ್ತದಲ್ಲಿ ಕನ್ನಡ ಧ್ವಜಾರೋಹಣಕ್ಕೆ ಸೂಕ್ತ ಸ್ಥಳವನ್ನು ನಿಗದಿ ಮಾಡಿಕೊಡುವಂತೆ ಕರವೇ ಕಾರ್ಯಕರ್ತ ಗಾಂಧೀ ಒತ್ತಾಯಿಸಿದರು.


ಭೋವಿ ಕುಮಾರ್ ಮಾತನಾಡಿ, ಸಂತೆ ಮೈದಾನದ ಸುತ್ತ ಮಳಿಗೆಗಳನ್ನು ನಿರ್ಮಿಸಿದರೆ ಪುರಸಭೆಗೆ ಆದಾಯ ಬರುತ್ತದೆ ಎಂಬ ಸಲಹೆ ನೀಡಿದರು. ಜಾಮಿಯಾ ಮಸೀದಿ ರಸ್ತೆಯಲ್ಲಿ ವ್ಯಕ್ತಿಯೊಬ್ಬರು ಸಾರ್ವಜನಿಕ ರಸ್ತೆ ಒತ್ತುವರಿ ಮಾಡಿ, ಫಿಲ್ಲರ್ ಹಾಕಿರುವ ಬಗ್ಗೆ ಪಟೇಲ್ ಬೀಡಿ ರೋಷನ್ ಪುರಸಭೆ ಗಮನಕ್ಕೆ ತಂದರು.

7ನೇ ವಾರ್ಡ್‌ನಲ್ಲಿ ನೀರಿನ ಪೈಪ್ ಒಡೆದಿರುವ ಬಗ್ಗೆ ಪಾನಿಪೂರಿ ಸಿದ್ದೇಶ್ ಗಮನಕ್ಕೆ ತಂದರು. ಗುತ್ತಿಗೆದಾರ ಎಸ್. ದಾದಾವಲಿ ಪಟ್ಟಣದ ಅಭಿವೃದ್ಧಿಗೆ ವಿಶೇಷ ಅನುದಾನ ತರುವಂತೆ ಸಲಹೆ ನೀಡಿದರು.

ನಂತರ ಮಾತನಾಡಿದ ಮುಖ್ಯಾಧಿಕಾರಿ ಉದಯಕುಮಾರ್ ಎನ್. ತಳವಾರ ಸದಸ್ಯರ ಸಲಹೆಯಂತೆ ಇನ್ನೊಂದು ಸಾರ್ವಜನಿಕ ಸಭೆ ಮತ್ತು ಸಾಮಾನ್ಯ ಸಭೆ ನಡೆಸಿ ಬಜೆಟ್ ಮಂಡಿಸುವ ಕುರಿತು ಶೀಘ್ರವೇ ನಿರ್ಧರಿಸಲಾಗುವುದು. ಖಾಲಿ ನಿವೇಶನ ಸ್ವಚ್ಛವಾಗಿಟ್ಟುಕೊಳ್ಳಲು ಮಾಲೀಕರಿಗೆ ನೋಟಿಸ್ ನೀಡಲಾಗುವುದು. ಬಾಪೂಜಿ ಹಾಲ್ ಪುನರ್ ನಿರ್ಮಾಣಕ್ಕೆ ಸ್ವಚ್ಛ ಭಾರತ ಯೋಜನೆಯ 50 ಲಕ್ಷ ರೂ. ಅನುದಾನ ಬಳಕೆ ಮಾಡುವ ಕುರಿತು ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ, ತಿಳಿಸುವುದಾಗಿ ಹೇಳಿದರು. ಬಜೆಟ್ ಇತಿಮಿತಿಯೊಳಗೆ ಪಟ್ಟಣದ ಅಭಿವೃದ್ಧಿಗಾಗಿ ಅಗತ್ಯ ಯೋಜನೆಗಳಿಗೆ ಒತ್ತು ನೀಡುವುದಾಗಿ ಉದಯಕುಮಾರ್ ಭರವಸೆ ನೀಡಿದರು.

ಪುರಸಭೆ ಉಪಾಧ್ಯಕ್ಷೆ ಅಂಜಿನಮ್ಮ, ಸ್ಥಾಯಿಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ, ಸದಸ್ಯರಾದ ಎ. ಆರಿಫ್ ಅಲಿ, ಯೂಸುಫ್, ಮಹಾಲಿಂಗಪ್ಪ, ಲತೀಫ್‌ಸಾಬ್, ಮಾಸಣಗಿ ಶೇಖರಪ್ಪ, ಸಾಕಮ್ಮ ರವಿಕುಮಾರ್, ಶಶಿಕಲಾ ಕೇಶವಾಚಾರಿ, ನಾಗರಿಕರಾದ ಭೋವಿ ಶಿವು, ಪಿ. ನ್ಯಾಮತ್‌ವುಲ್ಲಾ, ಪಾಳೇಗಾರ್ ನಾಗರಾಜ್, ಎಂ.ಎನ್. ಮಂಜುನಾಥ್, ಅಧಿಕಾರಿಗಳಾದ ದಿನಕರ್, ಉಮೇಶ್, ಗುರುಪ್ರಸಾದ್, ಪ್ರಭು, ನವೀನ್, ಇಮ್ರಾನ್ ಇನ್ನಿತರರು ಉಪಸ್ಥಿತರಿದ್ದರು.

# ಮೇಯರ್ ಅಜಯ್‌ಕುಮಾರ್ ಅವರ ಮಹಾತ್ವಕಾಂಕ್ಷೆಯ ಮನೆ ಬಾಗಿಲಿಗೆ ಪಾಲಿಕೆ: ಇಂದು ಸಮಾರೋಪ



ದಾವಣಗೆರೆ, ಫೆ.19- ಮಹಾನಗರ ಪಾಲಿಕೆ ವತಿಯಿಂದ ಹಮ್ಮಿಕೊಂಡಿದ್ದ ಮನೆ ಬಾಗಿಲಿಗೆ ಪಾಲಿಕೆ ಕಾರ್ಯಕ್ರಮದ ಸಮಾರೋಪ ಸಮಾರಂಭವು ನಾಳೆ ದಿನಾಂಕ 20ರ ಭಾನುವಾರ ಸಂಜೆ ನಡೆಯಲಿದೆ ಎಂದು ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ಹೇಳಿದ್ದಾರೆ.

ಪಾಲಿಕೆಯ ತಮ್ಮ ಕಚೇರಿಯಲ್ಲಿ ಶುಕ್ರವಾರ ಸಂಜೆ ಪತ್ರಿಕಾಗೋಷ್ಠಿ ನಡೆಸಿ ಈ ಬಗ್ಗೆ ಮಾಹಿತಿ ನೀಡಿದ ಅವರು, ನಮ್ಮ ಕಾರ್ಯಕ್ರಮಕ್ಕೆ ಅತೀವ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಹೇಳಿದರು.

17 ಮತ್ತು 24ನೇ ವಾರ್ಡ್‌ನ ಕಾರ್ಯಕ್ರಮವು ನಾಳೆ ದಿನಾಂಕ 20 ರಂದು ನಡೆಯಲಿದ್ದು, ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ, ಸಚಿವ ಹರ್ದೀಪ್ ಸಿಂಗ್ ಪುರಿ ಸಹ ದೂರವಾಣಿ ಕರೆ ಮಾಡಿ ಪ್ರಶಂಸೆ ವ್ಯಕ್ತಪಡಿಸಿರುವುದಾಗಿ ಮೇಯರ್ ಹೇಳಿದರು.

32ನೇ ವಾರ್ಡ್‌ನ ಉಮಾ ಪ್ರಕಾಶ್ ಮತ್ತು 35ನೇ ವಾರ್ಡ್‌ನ ಸದಸ್ಯರಾದ ಸವಿತಾ ಗಣೇಶ್ ಅವರು ಕಾರ್ಯಕ್ರಮ ನಡೆಸಲು ಆಸಕ್ತಿ ತೋರದ ಕಾರಣ ಅಲ್ಲಿ ಕಾರ್ಯಕ್ರಮ ನಡೆಸಿಲ್ಲ. ಉಳಿದಂತೆ ಈಗಾಗಲೇ 41 ವಾರ್ಡ್‌ಗಳಲ್ಲಿ ಈ ಕಾರ್ಯಕ್ರಮ ಮುಗಿದಿದೆ ಎಂದು ತಿಳಿಸಿದರು.

ಮನೆ ಬಾಗಿಲಿಗೆ ಮಹಾನಗರ ಪಾಲಿಕೆ ಕಾರ್ಯಕ್ರಮಕ್ಕಾಗಿ ಸುಮಾರು 9 ಲಕ್ಷ ರೂ. ವೆಚ್ಚವಾಗಿದೆ ಎಂದವರು ವಿವರಿಸಿದರು.

### ಕಾರ್ಯಕ್ರಮದಿಂದ ಆದ ಲಾಭಗಳು

ಆಸ್ತಿ ತೆರಿಗೆ ಮತ್ತು ನೀರಿನ ದರದಿಂದ 1.45 ಕೋಟಿ ರೂ.ಸಂಗ್ರಹವಾಗಿದೆ. 344 ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆ. 4.59 ಲಕ್ಷ ರೂ.ಸಂಗ್ರಹವಾಗಿದೆ.

490 ಜನನ–ಮರಣ ಪ್ರಮಾಣ ಪತ್ರಗಳನ್ನು ಸ್ಥಳದಲ್ಲೇ ವಿತರಣೆ ಮಾಡಲಾಗಿದೆ. 21 ಕಟ್ಟಡ ಪರವಾನಗಿ ನೀಡಲಾಗಿದೆ. 344 ಟ್ರೇಡ್ ಲೈಸನ್ಸ್ ನೀಡಲಾಗಿದೆ. ಎಂಜಿನಿಯರಿಂಗ್ ಶಾಖೆಗೆ 206, ಆಶ್ರಯ ಶಾಖೆಗೆ 95, ಆರೋಗ್ಯ ಶಾಖೆಗೆ 38, ವಿದ್ಯುತ್ ಶಾಖೆಗೆ 286, ಕಂದಾಯ ಶಾಖೆಗೆ 17 ದೂರು ಗಳು ಬಂದಿದ್ದವು. ಶೇ 60ರಷ್ಟು ಪ್ರಕರ

ಣಗಳನ್ನು ಇತ್ಯರ್ಥಗೊಳಿಸಲಾಗಿದೆ. 1950ರಲ್ಲಿ ಮೃತಪಟ್ಟಿದ್ದ ಭಾರತ್ ಕಾಲೋನಿಯ ಸಿದ್ಧವೀರಪ್ಪ ತಂದೆ ವಿರಾಟಪ್ಪ ಎನ್ನುವವರ ಮರಣ ಪ್ರಮಾಣ ಪತ್ರವನ್ನು ನೀಡುವ ಮೂಲಕ ಈ ಕಾರ್ಯಕ್ರಮ ದಾಖಲೆ ನಿರ್ಮಿಸಿದೆ.





## 60ನೇ ಹುಟ್ಟು ಹಬ್ಬದ ಶುಭಾಶಯಗಳು

ದಿನಾಂಕ 20.2.2021ರಂದು ತಮ್ಮ 60ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ನಮ್ಮ ಆತ್ಮೀಯರೂ, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯವಾದಿಗಳೂ ಆದ ದಾವಣಗೆರೆ ದೊಡ್ಡಪೇಟೆಯ

**ಶ್ರೀ ಡಿ.ಎಸ್. ಜಯರಾಜ್ ದೇವರಮನೆ**

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.





✦ ಅಥಣಿ ವೀರಣ್ಣ ✦ ಡಿ.ಎಸ್. ಶಿವಕುಮಾರ್ ✦ ಡಿ.ಎಸ್. ಸಿದ್ದರಾಮಣ್ಣ ✦ ಡಿ.ಎಸ್. ವಿಜಯಕುಮಾರ್ ✦ ಬೇತೂರು ರಾಜೇಶ್ ✦ ಬೇತೂರು ಜಗದೀಶ್ ✦ ಬೇತೂರು ಸಂಪತ್ ✦ ಬೆಳ್ಳೂಡಿ ವೀರಣ್ಣ ✦ ರವಿಕುಮಾರ್ (ರವಿ ಬೆಣ್ಣೆ ದೋಸೆ ಹೋಟೆಲ್) ✦ ಇ.ಎಂ. ಮಂಜುನಾಥ ✦ ಬೇತೂರು ಸುರೇಶ್ ✦ ಷಣ್ಮುಖಪ್ಪ ✦ ಹೊಳೆಹೊನ್ನೂರು ಈಶಣ್ಣ ✦ ಬಿಳಿಚೋಡು ಉಮೇಶ್ ✦ ಬೇತೂರು ಪ್ರದೀಪ್, ಹೈದರಾಬಾದ್ ✦ ಬೇತೂರು ಕಿರಣ್ ✦ ಬೇತೂರು ಪ್ರಕಾಶ್

## ದಾವಣಗೆರೆ ಮೇಯರ್ ಚುನಾವಣೆ : ರಿಟ್ ಅರ್ಜಿ ವಜಾ ಮಾಡಿದ ಹೈಕೋರ್ಟ್

ದಾವಣಗೆರೆ, ಫೆ.19- ಮಹಾನಗರ ಪಾಲಿಕೆ ಮೇಯರ್ ಮತ್ತು ಉಪಮೇಯರ್ ಚುನಾವಣೆಯ ಮತದಾರರ ಪಟ್ಟಿಗೆ ಸಚಿವ ಆರ್.ಶಂಕರ್ ಮತ್ತು ವಿಧಾನಪರಿಷತ್ ಸದಸ್ಯ ಚಿದಾನಂದಗೌಡ ಅವರ ಹೆಸರು ಸೇರ್ಪಡೆ ಪ್ರಶ್ನಿಸಿ ಪಾಲಿಕೆಯ ಕಾಂಗ್ರೆಸ್‌ನ ಕೆಲ ಸದಸ್ಯರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ರಾಜ್ಯ ಹೈಕೋರ್ಟ್ ಇಂದು ವಜಾಗೊಳಿಸಿದೆ.

ಈ ಮೂಲಕ ಮತದಾರರ ಪಟ್ಟಿಯಲ್ಲಿ ಎಂಎಲ್ಸಿಗಳ ಹೆಸರನ್ನು ಅಕ್ರಮವಾಗಿ ಸೇರ್ಪಡೆಗೊಳಿಸಲಾಗಿದೆ ಎಂಬ ಕಾಂಗ್ರೆಸ್ ಆರೋಪ ನಿರಾಧಾರವಾದದ್ದು ಎಂದು ಸಾಬೀತಾಗಿದ್ದು, ವಿಧಾನ ಪರಿಷತ್ ಸದಸ್ಯರು ಇದೇ ದಿನಾಂಕ 24 ರಂದು ನಡೆಯಲಿರುವ ಮೇಯರ್, ಉಪ ಮೇಯರ್ ಚುನಾವಣೆಗೆ ಮತ ಹಾಕಲು ಅವಕಾಶ ನೀಡಿರುವುದು ಸಾಂವಿಧಾನಿಕವಾಗಿದೆ ಎಂಬುದನ್ನು ಉಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ. ಇದರಿಂದಾಗಿ ಈ ಬಾರಿಯೂ ಸಹ ಪಾಲಿಕೆಯಲ್ಲಿ ಅಧಿಕಾರವನ್ನು ಭಾಜಪ ಅಲಂಕರಿಸಲಿದೆ ಎಂಬ ವಿಶ್ವಾಸ ದೃಢವಾಗಿದೆ ಎಂದು ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ತಿಳಿಸಿದ್ದಾರೆ.


## ಭಾರತ-ಚೀನಾ : ಪಂಗಾಂಗ್ ಕೊಳದಿಂದ ಸೈನ್ಯ ವಾಪಸ್ ಪೂರ್ಣ


ನವದೆಹಲಿ, ಫೆ. 19 – ಪಂಗಾಂಗ್ ಕೊಳದ ಉತ್ತರ ಹಾಗೂ ದಕ್ಷಿಣ ದಂಡೆಗಳಿಂದ ಸೈನ್ಯ ಹಾಗೂ ಶಸ್ತ್ರಗಳನ್ನು ಸಂಪೂರ್ಣ ವಾಪಸ್ ಪಡೆದಿರುವ ಭಾರತ ಹಾಗೂ ಚೀನಾ, ನಾಳೆ ಶನಿವಾರ ಪೂರ್ವ ಲಡಾಖ್‌ನ ಇನ್ನಷ್ಟು ಪ್ರದೇಶಗಳಿಂದ ಸೈನ್ಯ ವಾಪಸ್ ಪಡೆಯುವ ಬಗ್ಗೆ ಚರ್ಚೆ ನಡೆಸಲಿವೆ. ಹಾಟ್ ಸ್ಪ್ರಿಂಗ್ಸ್, ಗೊಗ್ರ ಹಾಗೂ ಡೆಪ್ಸಾಂಗ್ ಪ್ರದೇಶಗಳಿಂದ ಸೈನ್ಯ ವಾಪಸ್ ಪಡೆಯುವ ಬಗ್ಗೆ ಕಾರ್ಪ್ಸ್ ಕಮಾಂಡರ್ ಹಂತದ ಹತ್ತನೇ ಸುತ್ತಿನ ಮಾತುಕತೆ ಬೆಳಿಗ್ಗೆ 10 ಗಂಟೆಗೆ ಮೊಲ್ಡೊ ಗಡಿಯಲ್ಲಿ ನಡೆಯಲಿದೆ. ಕೆಲ ಪ್ರದೇಶಗಳಲ್ಲಿ ಸೈನ್ಯ ವಾಪಸ್ ಪಡೆದ ನಂತರ ಮೊದಲ ಬಾರಿಗೆ ಮಾತುಕತೆ ನಡೆಯುತ್ತಿದೆ.

## ಇಂದ್ರಧನುಷ್ 3.0 ಲಸಿಕಾ ಅಭಿಯಾನಕ್ಕೆ ಚಾಲನೆ

ನವದೆಹಲಿ, ಫೆ. 19 – ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಅವರು ಇಂದ್ರ ಧನುಷ್ 3.0 ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಕೊರೊನಾ ವೈರಸ್ ಕಾರಣದಿಂದಾಗಿ ಲಸಿಕೆ ಪಡೆದುಕೊಳ್ಳದ ಮಕ್ಕಳು ಹಾಗೂ ಗರ್ಭಿಣಿ ಮಹಿಳೆಯರಿಗೆ ಈ ಯೋಜನೆಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು.

ಫೆಬ್ರವರಿ 22ರಿಂದ ಮಾರ್ಚ್ 22ರವರೆಗೆ ಇಂಧ್ರ ಧನುಷ್ 3.0 ಅಭಿಯಾನ ನಡೆಯಲಿದೆ. 29 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 250 ಜಿಲ್ಲೆಗಳು ಹಾಗೂ ನಗರ ಪ್ರದೇಶಗಳಲ್ಲಿ ಈ ಅಭಿಯಾನ ನೆರವೇರಲಿದೆ.
















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte